ಸಂಪುಟ 04 | ಸಂಚಿಕೆ 09 | ಸೋಮವಾರ 08 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1. ಬೌದ್ಧ ಧರ್ಮದಲ್ಲಿ ಬೋಧಿ ದಿನ (Bodhi Day)**

ಬುದ್ಧನು ಬೋಧಿ ವೃಕ್ಷದ ಕೆಳಗೆ ಜ್ಞಾನೋದಯ (Enlightenment) ಹೊಂದಿದ ದಿನವೆಂದು ಆಚರಿಸಲಾಗುತ್ತದೆ. ಜಪಾನ್ ಸೇರಿದಂತೆ ಅನೇಕ ಬೌದ್ಧ ದೇಶಗಳಲ್ಲಿ ಇದು ಪ್ರಮುಖ ಧಾರ್ಮಿಕ ದಿನ.ಧ್ಯಾನ, ಪ್ರಾರ್ಥನೆ, ದಾನ ಮತ್ತು ಶಾಂತಿಯ ಸಂದೇಶಗಳನ್ನು ಹಂಚಿಕೊಳ್ಳುವ ಸಂಪ್ರದಾಯ.

**2. ಭಾರತ ಉಪಾಧ್ಯಾಯ ದಿನ (Regional Teachers' Day Observance) :**

ಶಿಕ್ಷಣ ಪ್ರಕರಣಗಳಲ್ಲಿ ಕೆಲವಡೆ ಆಚರಣೆ ಇದು ಅಧಿಕೃತ ರಾಷ್ಟ್ರೀಯ ದಿನವಲ್ಲ, ಆದರೆ ಕೆಲ ರಾಜ್ಯಗಳಲ್ಲಿ ವಿಶೇಷ ಗೌರವ ಕಾರ್ಯಕ್ರಮಗಳು ನಡೆಯಬಹುದು.

**3. ಬುದ್ಧಿಮಾಂದ್ಯರ ರಾಷ್ಟ್ರೀಯ ದಿನ :**

ಬುದ್ಧಿಮಾಂದ್ಯರ ರಾಷ್ಟ್ರೀಯ ದಿನ 'ಬುದ್ಧಿಮಾಂದ್ಯತೆ' ಕುರಿತು ಜಾಗೃತಿ ಮೂಡಿಸಲು ಮತ್ತು 'ಬುದ್ಧಿಮಾಂದ್ಯತೆ' ಹೊಂದಿರುವ ವ್ಯಕ್ತಿಗಳ ಹಕ್ಕುಗಳನ್ನು ಬೆಂಬಲಿಸಲು ವಿಶ್ವ ಸಂಸ್ಥೆ [ವಿಶ್ವ ಬುದ್ಧಿಮಾಂದ್ಯತೆ ದಿನ] ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲಾಗುವ ದಿನಗಳನ್ನು ಉಲ್ಲೇಖಿಸಬಹುದು.

## ಸುಭಾಷಿತ

ನಮ್ಮ ಸುತ್ತಮುತ್ತ ಇರುವವರು ನಮ್ಮನ್ನು ಪ್ರೀತಿಸಿದರೆ ನಾವು ಗಟ್ಟಿಯಾಗುತ್ತೇವೆ. ಅವರೇನಾದರೂ ದ್ವೇಷಿಸಲು ಆರಂಭಿಸಿದರೆ ನಮ್ಮನ್ನು ತಡೆಯುವವರು ಯಾರೂ ಇರುವುದಿಲ್ಲ. ಇದೇ ಮನುಷ್ಯನ ಅಂತಃಶಕ್ತಿಯ ರಹಸ್ಯ.

–ಕ್ರಿಸ್ಟಿಯಾನೋ ರೊನಾಲ್ಡೊ

# ಮಸ್ಕಿಯಲ್ಲಿ ಅದ್ದೂರಿಯಾಗಿ ಜರುಗಿದ ಕನಕದಾಸರ 538 ನೇ ಜಯಂತೋತ್ಸವ

ನೈಜ್ಯ ದೆಸೆ ನ್ಯೂಸ್

ಸಮಾಜದಲ್ಲಿನ ಮೂಢನಂಬಿಕೆ, ಜಾತಿ ಪದ್ಧತಿ ಅನಿಷ್ಟ ಪದ್ಧತಿಗಳ ವಿರುದ್ದ ಧ್ವನಿ ಎತ್ತಿ, ಸಮಾಜದ ಅಂಕು–ಡೊಂಕುಗಳನ್ನು ತಿದ್ದಿದ ಮಹಾನ್ ದಾರ್ಶನಿಕ ಕನಕದಾಸರು ಶಾಸಕ ಆರ್.ಬಸನಗೌಡ

ಮಸ್ಕಿ: ಕನಕದಾಸರು ದಾರ್ಶನಿಕ ಮಾತ್ರರಲ್ಲದೆ ಸಮಾಜದ ಸುಧಾಕರೂ ಆಗಿದ್ದರು. ಸಮಾಜ ಸುಧಾರಣೆಗೆ ಹಲವಾರು ಕೊಡುಗೆಗಳ್ನು ನೀಡಿದ್ದಾರೆ. ಸಮಾಜದಲ್ಲಿನ ಮೂಢನಂಬಿಕೆ, ಜಾತಿ ಪದ್ಧತಿ ಸೇ–ರಿದಂತೆ ಅನಿಷ್ಟ ಪದ್ಧತಿಗಳ ವಿರುದ್ದ ಧ್ವನಿ ಎತ್ತಿ, ಸಮಾಜದ ಅಂಕು–ಡೊಂಕುಗಳನ್ನು ತಿದ್ದಿದ ಮಹಾನ್ ದಾರ್ಶನಿಕರು. ಅವರ ಜೀವನದ ತತ್ವಗಳು ಇಂದಿನ ಪೀಳಿಗೆಗೆ ಮಾದರಿಯಾಗಬೇಕೆಂದು ಶಾಸಕ ಆರ್.ಬಸನಗೌಡ ತುರವಿಹಾಳ ಹೇಳಿದರು. ಪಟ್ಟಣದ ಭ್ರಮರಾಂಬ ಕಲ್ಯಾಣ ಮಂಟಪದಲ್ಲಿ ಕುರುಬ ಸಮಾಜದಿಂದ ರವಿವಾರ ಹಮ್ಮಿಕೊಂಡಿದ್ದ 538ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಅವರು ಕನಕದಾಸರು ಒಂದು ವರ್ಗಕ್ಕೆ ಸೀಮಿತವಾಗಿಲ್ಲ. ಅವರು ಕಾವ್ಯ ಹಾಗೂ ಕೀರ್ತನೆಗಳ ಮೂಲಕ ಸಮಾಜದಲ್ಲಿ ಬೇರೂ–ರಿದ್ದ ಕಂದಾಚಾರಗಳನ್ನು ಹೋಗಲಾಡಿಸಲು ಶ್ರಮಿಸಿ, ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿ, ಎಲ್ಲರನ್ನು ಸಮಾನತೆ ದೃಷ್ಟಿಕೋನದಿಂದ ನೋಡುವಂತೆ ತಿಳಿಸಿ



ವಿಶ್ವಮಾನವರಾಗಿದ್ದಾರೆ ಎಂದು ಹೇಳಿದರು.ನಂತರ ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಮಾತನಾಡಿ ಅಧ್ಯಾತ್ಮ–ಭಕ್ತಿ ಪಂಥದ ಕೀರ್ತನೆಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ಸಾರಿದ ದಾಸಶೇಷ್ಠ ಕನಕದಾಸರ ಜೀವನ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದವರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಶಿಕ್ಷಣ ಒಂದಿದ್ದರೆ ಜೀವನದಲ್ಲಿ ಒಬ್ಬ ವ್ಯಕ್ತಿ ಉನ್ನತಮಟ್ಟಕ್ಕೇರಲು ಸಾಧ್ಯವಾಗುತ್ತದೆ. ಜೀವನದಲ್ಲಿ ಕನಕದಾಸರ ಆದ–ರ್ಶನಗಳನ್ನು ಅಳಡಿಸಿಕೊಳ್ಳಬೇಕೆಂದು ಹೇಳಿದರು. ಕುರುಬ ಸಮಾಜದ ರಾಜ್ಯಾಧ್ಯಕ್ಷ ಎಂ.ಈರಣ್ಣ



ಮಾತನಾಡಿ ಸಮಾಜದ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ಬೆಂಗಳೂರಿನಲ್ಲಿ ಹೊಸದಾಗಿ ಹಾಸ್ಟೇಲ್ ನಿರ್ಮಾಣಕ್ಕೆ ಜಾಗ ಮತ್ತು ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಸಮಾಜದ ಮಕ್ಕಳ ಉನ್ನತ ಶಿಕ್ಷಣಕ್ಕೆ ಅನುಕೂಲವಾಗಲಿದೆ ಎಂದು ಹೇಳಿದರು. ಮಸ್ಕಿ ಪಟ್ಟಣದಲ್ಲಿ ಕನಕ ಭವನ ನಿರ್ಮಾಣಕ್ಕೆ ಹಾಲಿ–ಮಾಜಿ ಇಬ್ಬರು ಶಾಸಕರು ತಮ್ಮ ಅಧಿಕಾರದ ಅವಧೀಯಲ್ಲಿ ತಲಾ 1 ಕೋಟಿ ಅನುದಾನ ನೀಡಿದ್ದಾರೆ.

ಮೆರವಣಿಗೆ: ಕನಕದಾಸರ 538ನೇ ಜಯಂತೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಕನಕದಾಸರ ಭಾವಚಿತ್ರ, ಕುಂಬ, ಕಳಸ, ಡೊಳ್ಳು ಮೆರವಣಿಗೆಯೂ ಮುದಿಯಪ್ಪ ಗುಡಿಯಿಂದ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಭ್ರಮರಾಂಬ ಕಲ್ಯಾಣ ಮಂಟಪ ತಲುಪಿತು. ಈ ಸಂದರ್ಭದಲ್ಲಿ ಚಿದಾನಂದಯ್ಯ ಗುರುವಿನ್, ನಾಗಯ್ಯ ಗುರುವಿನ್, ಲಿಂಗಣ್ಣ ಪೂಜಾರಿ, ಬಸಣ್ಣ ಪೂಜಾರಿ, ಅಂಬಣ್ಣ ಪೂಜಾರಿ, ಆದಪ್ಪ ಪೂಜಾರಿ, ರಾರಾಯಪ್ಪ ಪೂಜಾರಿ, ಮಲ್ಲನಗೌಡ ತುರವಿಹಾಳ, ಕೆ.ಭೀಮಣ್ಣ ವಕೀಲರು ಬಾಪುಗೌಡ, ಮಾಳಿಂಗರಾಯ, ಡಾ.ನಾಗವೇಣಿ, ಮಲ್ಲನಗೌಡ ಸುಂಕನೂರು, ಅಮರೇಶ ಗುರಿಕಾರ, ದುರುಗೇಶ ವಕೀಲರು, ಹನುಮೇಶ ಬಾಗೋಡಿ, ಅಮರೇಶ ಕ್ಯಾತ್ನಟ್ಟಿ, ಬೀರಪ್ಪ ಗುಡಿಹಾಳ, ಬೀರಪ್ಪ ವೆಂಕಟಾಪೂರು, ರಮೇಶ ಕರೆಕುರಿ, ಬಸವರಾಜ ಗೂಗ್ಲಿ ಸೇರಿದಂತೆ ಕುರುಬ ಸಮಾಜದ ನೂರಾರು ಮುಖಂಡರು ಮತ್ತು ಯುವಕರು, ಮಹಿಳೆಯರಿದ್ದರು.

# ಮಕ್ಕಳ ಪ್ರತಿಭೆ ಗುರುತಿಸಲು ಈ ವೇದಿಕೆ ಸೂಕ್ತ ಸದುಪಯೋಗ ಪಡೆಸಿಕೊಳ್ಳಿ – ವೈ ಭೂಪನಗೌಡ

ನೈಜ್ಯ ದೆಸೆ ನ್ಯೂಸ್

ಸಿರವಾರ :ಗ್ರಾಮೀಣಮಕ್ಕಳಲಿ ್ಲಅಡಗಿರುವ ಒಳ್ಳೊಳ್ಳೆ ಪ್ರತಿಭೆಯನು ್ನಗುರುತಿಸಲು ಸೂಕ್ತ ವೇದಿಕೆಯಾದ ಮಕ್ಕಳಪ್ರತಿಭೆಯನ್ನು ಪ್ರೋತ್ಸಾಹ ನೀಡಿದಂತಾಗುತ್ತದೆ ವಿದ್ಯಾರ್ಥಿಗಳು ಸದುಪಯೋಗ ಪಡೆಸಿಕೊಳ್ಳಿ ನಿರ್ಣಾಯಕರು ಸಹ ನಿಷ್ಪಕ್ಷಪಾತವಾಗಿ ನಿರ್ಣಯ ನೀಡಿ ಎಂದು ಪ ಪಂ ಅಧ್ಯಕ್ಷ ವೈ ಭೂಪನಗೌಡ ಹೇಳಿದರು. ಪಟ್ಟಣದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಿಡಬ್ಲ್ಯೂಡಿ ಕ್ಯಾಂಪ್ ಶಾಲೆಯಲ್ಲಿ ಜಿಲ್ಲಾ ಪಂಚಾಯತ ಹಾಗೂ ಶಾಲಾ ಶಿಕ್ಷಣ ಇಲಾಖೆ ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಕ್ಷೇತ್ರ ಸಮನ್ವಯಾದಿಕಾರಿಗಳ ಕಾರ್ಯಾಲಯ ಹಾಗೂ



ಸಮೂಹ ಸಂಪನ್ಮೂಲ ಕೇಂದ್ರ ಸಿರವಾರ ಪೂರ್ವ ವಲಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿ ಜೀವನದಲ್ಲಿ ಪಠ್ಯದ ಜೊತೆಗೆ ಮಕ್ಕಳು ತಮ್ಮ ಪ್ರತಿಭೆ ಉತ್ತಮ ರೀತಿಯಲ್ಲಿ ಮಾಡುತ್ತಾರೆ ಖಾಸಗಿ ಶಾಲೆಗಿಂತ ಸರಕಾರಿ ಶಾಲಾ ಮಕ್ಕಳು ಪಠ್ಯದ ಜೊತೆ ಪಟೇತರ ಚಟುವಟಿಕೆಯ ಮೂಲಕ ವೇಷಭೂಷಣ ಧರಿಸಿ ಚಟುವಟಿಕೆಯಲ್ಲಿ ತೊಡಗಿ ತಮ್ಮನ್ನು ತಾವು ಅಳವಡಿಸಿಕೊಳ್ಳುತ್ತಾರೆ ಎಂದರು. ನಂತರ ಸರಕಾರಿ ನೌಕರರ ಸಂಘದ ಅಧ್ಯಕ್ಷ ಆರಿಫ್ ಮಿಯಾ ಮಾತನಾಡಿ ಶಿಕ್ಷಣದಲ್ಲಿ ಉತ್ತಮ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆ ಮತ್ತು ನಮ್ಮ ಶಿರವಾರ ತಾಲೂಕಿನ ವಿದ್ಯಾರ್ಥಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾನೆ ತುಂಬಾ ಸಂತೋಷದ ವಿಷಯ ಅದೇ ರೀತಿ ಮಕ್ಕಳು ತಮ್ಮ ಜೀವನದ ಮೌಲ್ಯಗಳ ಜೊತೆಗೆ ಉತ್ತಮ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಮಕ್ಕಳ ಪ್ರತಿಭೆಗೆ ಶಿಕ್ಷಕರು ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.ಪ್ರಸ್ತಾವಿಕವಾಗಿ ಸಮೂಹ ಸಂಪನ್ಮೂಲ ಸಿರವಾರ ಪೂರ್ವ ವಲಯದ ಮಹೇಶ್ ಮಾತನಾಡಿದರು ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯ ಮೂಲಕ ಉತ್ತಮ ರೀತಿಯ ವೇಷ ಭೂಷಣ ಧರಿಸಿ ಕಾರ್ಯಕ್ರಮದಲ್ಲಿ ನೆರಗು ಮೂಡಿಸಿದರು ಈ ಸಂದರ್ಭದಲ್ಲಿ ಪಂಚ ಗ್ಯಾರಂಟಿ ಅನುಷ್ಠಾನ ಕಾಂಗ್ರೆಸ್ ಯುವ ಮುಖಂಡರಾದ ಎಸ್ ದಾನನಗೌಡ, ಅರಕೇರಿ ಶಿವ ಶರಣ ಸಾಹುಕಾರ, ಪ ಪಂ ಸದಸ್ಯರಾದ ಹುಸೇನ್ ಅಲಿಸಾಬ್, ಅಜಿತ್ ಕುಮಾರ್ ಹೊನ್ನಟಗಿ ಮೌಲಾಸಾಬ್ ವರ್ತೆಸ್ಟ್, ಪ್ರೌಢಶಾಲೆ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಮೌನೇಶ್ ಹಣಗಿ, ಪ್ರಾಥಮಿಕ ಶಾಲೆ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಜಾವಿದ್ ಪಾಷಾ, ಎಸ್ ಸಿ ಎಸ್ ಟಿ ನೌಕರ ಸಂಘದ ಅಧ್ಯಕ್ಷೆ ಸುಮಿತ್ರ ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಇದ್ದರು

## 69ನೇ ಮಹಾ ಪರಿನಿರ್ವಾಣ ದಿನ ಆಚರಣೆ



ನೈಜ್ಯ ದೆಸೆ ನ್ಯೂಸ್

ನೈಜ್ಯ ದೆಸೆ : ಲಿಂಗಸಗೂರು, ಡಿ 8 ಪಟ್ಟಣದಲ್ಲಿ ಶನಿವಾರ ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇ ಡ್ಕರ್ ಅವರ 69 ನೇ ಮಹಾ ಪರಿನಿರ್ವಾಣ ದಿನದಂದು ಶಾಸಕ ಮಾನಪ್ಪವಜ್ಜಲ್ ಕ್ಯಾಂಡಲ್ ಹಚ್ಚಿ , ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಿದರು.ಪಟ್ಟಣದ ಬಸ್ ನಿಲ್ದಾಣದ ಅಂಬೇಡ್ಕರ ಸರ್ಕಲ್ ನಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಶಾಸಕ ಮಾನಪ್ಪ ವಜ್ಜಲ್ ಪುಷ್ಪ ನಮನ ಸಲ್ಲಿಸಿ ನಂತರ ಮಾತನಾಡಿದ ಅವರುಅಂಬೇಡ್ಕರ್ ಎಂದರೆ ಬರೀ ವ್ಯಕ್ತಿಯಲ್ಲ ಅವರು ಮಹಾನ್ ಶಕ್ತಿ, ಧೈರ್ಯ ತತ್ವವೇ ಅಂಬೇಡ್ಕರ್ ದೇಶದ ಅಖಂಡತೆಗೆ ಅವರ ಸೇವೆ ಅನನ್ಯವಾದುದು. ಅವರನ್ನು ಕೇವಲ ಶೋಷಿತ ವರ್ಗದನಾಯಕರು ಎಂದುಭಾವಿಸುವಂತಿಲ್ಲಅವರುಸಮಾಜದ ಎಲ್ಲ ವರ್ಗಗಳ ನಾಯಕರಾಗಿದ್ದಾರೆ–ಎಂದುಹೇಳಿದರುಈಸಂದರ್ಭದಲ್ಲಿಬಿಜೆಪಿ ಬಿಜೆಪಿ ಮಂಡಲ ಅದ ್ಯಕ್ಷನಾಗಭೂಷಣ್,ಮುಖಂಡರಾದ ಗಿರಿಮಲ್ಲನ ಗೌಡ , ಅಯ್ಯಪ್ಪ ವಕೀಲರು, ಮೋಹನ ಗೋಸ್ಲೆ , ಹನುಮಂತ ನಾಯಕ, ಶಿವುಪುತ್ರ ಬೀದರ್ ಸೇರಿದಂತೆ ಅನೇಕರು ಇದ್ದರು.

# 11ಎ ಖಾತಾ, ಮೂಲಭೂತ ಸೌಕರ್ಯಗಳು ಒದಗಿಸಲು ಅಖಿಲ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಆಗ್ರಹ.

ನೈಜ್ಯ ದೆಸೆ ನ್ಯೂಸ್

ಕವಿತಾಳ: ಪಟ್ಟಣದ ಜನತಾ ಕಾಲೊನಿ ನಿವಾಸಿಗಳಿಗೆ 11ಎ ಖಾತಾ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದಿಂದ ಪ.ಪಂ. ಸಿಬ್ಬಂದಿ ಪ್ರಶಾಂತ್ ಅವರಿಗೆ ಬುಧವಾರ ಮನವಿ ಪತ್ರ ಸಲ್ಲಿಸಲಾಯಿತು.ಅನೇಕರು ಕೃಷಿ ತೇಗದ ಭೂಮಿಗಳಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಅಂಥವ–ರಿಗೆ ಗ್ರಾಮೀಣ ಪ್ರದೇಶದಲ್ಲಿ 11 ಬಿ ಇ–ಸ್ವತ್ತು ಹಾಗೂ ನಗರ ಪ್ರದೇಶಗಳಲ್ಲಿ 11ಎ ಇ–ಸ್ವತ್ತು ಕೊಡುವ ಯೋಜನೆ ರೂಪಿಸಿ, ಇ–ಸ್ವತ್ತನ್ನು 6 ಗ್ಯಾರಂಟಿ ಎಂದು ಘೋಷಿಸಲಾಗಿದೆ. ಆದರೆ, ಗ್ರಾ.ಪಂ. ಮತ್ತು ಪ.ಪಂ. ಗಳು ಏನೂ ಗೊತ್ತಿಲ್ಲದಂತೆ ಮೌನವ ಹಿಸಿವೆ. ಗ್ರಾ.ಪಂ. ಮತ್ತು ಪ.ಪಂ. ವ್ಯಾಪ್ತಿಯ ಆಸ್ತಿ ದಾಖಲೆಗಳಿಗೆ 11ಬಿ, 11ಎ ಖಾತೆ ಪಡೆಯಲು ಜನರು ಅರ್ಜಿ ಸಲ್ಲಿಸಿದ 15



ದಿನಗಳೊಳಗೆ ಖಾತೆ ನೀಡಬೇಕು ಎಂದು ಸರಕಾರ ಹೇಳಿದೆ. ಆದರೆ, ಈ ಕೆಲಸವಾಗುತ್ತಿಲ್ಲ, ಎಂದು ದೂ–ರಿದರು.ಪ.ಪಂ. ವ್ಯಾಪ್ತಿಯ ಜನತಾ ಕಾಲೊನಿ ಹಾಗೂ ಇತರೆ ವಾರ್ಡ್‌ಗಳಲ್ಲಿ ವಾಸಿಸುವ ಕುಟುಂಬಗಳ ಸರ್ವೆ ನಡೆಸುವ ಮೂಲಕ ಪ್ರತಿ ಕುಟುಂಬಕ್ಕೂ 11 ಎ ಖಾತಾ ಜತೆಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸಿದರು.ಸಂಘಟನೆಯ ರಾಜ್ಯ ಉಪಾಧ್ಯಕ್ಷ ರಮೇಶ ಇರಬಗೇರ, ಸಿರವಾರ ತಾಲೂಕಾಧ್ಯಕ್ಷ ಮೌನೇಶ ಬುಳ್ಳಾಪೂರ, ರಾಜ್ಯ ಪ್ರ.ಕಾ. ಎಂ.ಡಿ.ಮಹಿಬೂಬ್‌ಸಾಬ್, ಉಪಾಧ್ಯಕ್ಷಫಕೀರಪ್ಪ ಸೆಂಟ್ರಿಂಗ್, ಹೋಬ ಘಟಕದ ಅಧ್ಯಕ್ಷ ಹನುಮಂತ ಬುಳ್ಳಾಪೂರ, ಮುಖಂಡರಾದ ಹುಲುಗಪ್ಪ ಕೊಳ್ಳಿ, ಹುಲ್ಲೇಶ ಕೆಳಗೇರಿ, ಕರಿಯಪ್ಪ ಬುಳ್ಳಾಪೂರ, ಅಂಬರೇಶ ಬುಳ್ಳಾಪೂರ, ಪ.ಪಂ. ಸದಸ್ಯ ಯಲ್ಲಪ್ಪ ಮಾಡಗೇರಿ, ಪ.ಪಂ. ಮಾಜಿ ಸದಸ್ಯ ಎಚ್.ಬಸವರಾಜ ಹಾಗೂ ಕಿರಿಲಿಂಗಪ್ಪ ಮ್ಯಾಗಳಮನಿ, ಮುಸ್ತಫಾ ಒಂಟಿಬಂಡಿ, ನಿಂಗಣ್ಣ ತೋಳದ ಸೇರಿ ಇತರರಿದ್ದರು.

# ಭಾರತೀಯ ರಿಸರ್ವ್ ಬ್ಯಾಂಕ್ ಹಣಕಾಸು ನೀತಿ

ನೈಜ್ಯ ದೆಸೆ ನ್ಯೂಸ್

ಭಾರತೀಯ ರಿಸರ್ವ್ ಬ್ಯಾಂಕ್ ಹಣಕಾಸು ನೀತಿ: ಭಾರತೀಯ ರಿಸರ್ವ್ ಬ್ಯಾಂಕ್ (RBI) ದೇಶದ ಕೇಂದ್ರ ಬ್ಯಾಂಕ್ ಆಗಿದ್ದು, ಇದು ದೇಶದ ಹಣಕಾಸು ವ್ಯವಸ್ಥೆಯನ್ನು ನಿರ್ವಹಿಸುವ ಮತ್ತು ನಿಯಂತ್ರಿಸುವ ಪ್ರಧಾನ ಸಂಸ್ಥೆಯಾಗಿದೆ. ಆರ್‌ಬಿಐನ ಅತ್ಯಂತ ಪ್ರಮುಖ ಕಾರ್ಯಗಳಲ್ಲಿ ಹಣಕಾಸು ನೀತಿ ಯನ್ನು ರೂಪಿಸುವುದು ಒಂದು. ಈ ನೀತಿಯು ದೇಶದ ಆರ್ಥಿಕತೆಯಲ್ಲಿ ಹಣದ ಹರಿವು, ಸಾಲದ ಲಭ್ಯತೆ ಮತ್ತು ಬಡ್ಡಿದರಗಳನ್ನು ನಿರ್ಧರಿಸುತ್ತದೆ. ಆರ್‌ಬಿಐ ಹಣಕಾಸು ನೀತಿಯ ಮುಖ್ಯ ಉದ್ದೇಶವು 'ಬೆಲೆ ಸ್ಥಿರತೆ'ಯನ್ನು ಕಾಯ್ದುಕೊಳ್ಳುವುದರ ಮೂಲಕ ಸುಸ್ಥಿರ 'ಆರ್ಥಿಕ ಬೆಳವಣಿಗೆ'ಗೆ ಬೆಂಬಲ ನೀಡುವುದಾಗಿದೆ.

ಹಣಕಾಸು ನೀತಿಯ ಉದ್ದೇಶಗಳು ಆರ್‌ಬಿಐ ರೂಪಿಸುವ ಹಣಕಾಸು ನೀತಿಯು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತದೆ: ಹಣದುಬ್ಬರ ನಿಯಂತ್ರಣ : ಹಣದುಬ್ಬರವು ಆರ್ಥಿಕತೆಯ ಆರೋಗ್ಯಕ್ಕೆ ಅತ್ಯಂತ ನಿರ್ಣಾಯಕ ಅಂಶವಾಗಿದೆ. ಆರ್‌ಬಿಐ ಗುತ್ತಿಗೆ ಆಧಾರದ ಮೇಲೆ ಗ್ರಾಹಕ ಬೆಲೆ ಸೂಚ್ಯಂಕವನ್ನು (CPI) ಶೇ. 2 ರಿಂದ ಶೇ. 6 ರ ವ್ಯಾಪ್ತಿಯಲ್ಲಿ ನಿರ್ವಹಿಸುವ ಗುರಿಯನ್ನು ಹೊಂದಿದೆ.



ರಂಗನಾಥ ನೂಲಿಕರ, ವಿಶ್ರಾಂತ ಮುಖ್ಯ ಪ್ರಬಂಧಕರು, ಎಸ್ ಬಿ ಎಚ್.

ದರಗಳನ್ನು ಹೆಚ್ಚಿಸುವ ಮೂಲಕ ಅಥವಾ ಕಡಿಮೆ ಮಾಡುವ ಮೂಲಕ ಹಣದ ಹರಿವನ್ನು ನಿಯಂತ್ರಿಸಿ ಹಣದುಬ್ಬರವನ್ನು ಸಮತೋಲನದಲ್ಲಿ ಇಡಲಾಗುತ್ತದೆ.

ಆರ್ಥಿಕ ಬೆಳವಣಿಗೆಯ ಉತ್ತೇಜನ: ಬಡ್ಡಿದರಗಳನ್ನು ಸೂಕ್ತ ಮಟ್ಟದಲ್ಲಿ ಇರಿಸುವುದರಿಂದ ಬಂಡವಾಳ ಹೂಡಿಕೆ ಮತ್ತು ಬಳಕೆಯನ್ನು ಉತ್ತೇಜಿಸಿ, ಒಟ್ಟಾರೆ ಆರ್ಥಿಕ ಬೆಳವಣಿಗೆಗೆ ನೆರವು ನೀಡಲಾಗುತ್ತದೆ.

ವಿನಿಮಯ ದರ ಸ್ಥಿರತೆ : ದೇಶದ ಕರೆನ್ಸಿಯ (ರೂಪಾಯಿ) ಮೌಲ್ಯವನ್ನು ಸ್ಥಿರವಾಗಿ ಕಾಯ್ದುಕೊಳ್ಳಲು ಆರ್‌ಬಿಐ ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

ಹಣಕಾಸು ನೀತಿಯ ಸಾಧನಗಳು (Tools of Monetary Policy) ಹಣಕಾಸು ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಆರ್‌ಬಿಐ ವಿವಿಧ ಸಾಧನಗಳನ್ನು ಬಳಸುತ್ತದೆ. ಇವುಗಳನ್ನು ಸಾಮಾನ್ಯವಾಗಿ 'ಪರಿಮಾಣಾತ್ಮಕ ಸಾಧನಗಳು' (Quantitative Instrument) ಮತ್ತು 'ಗುಣಾತ್ಮಕ ಸಾಧನಗಳು' (ಕಿಣಚಿಟುಣಚಿಣುತಜ ಖಟ್ಞಣಡಿಣಟಜಟಿಣ) ಎಂದು ವಿಂಗಡಿಸಲಾಗಿದೆ.

ಪರಿಮಾಣಾತ್ಮಕ ಸಾಧನಗಳು:

ರೆಪೊ ದರ (Repo Rate): ವಾಣಿಜ್ಯ ಬ್ಯಾಂಕುಗಳು ಆರ್‌ಬಿಐನಿಂದ ಪಡೆಯುವ ಅಲ್ಪಾವಧಿಯ ಸಾಲದ ಮೇಲಿನ ಬಡ್ಡಿ ದರ. ಇದು ಹಣ–ಕಾಸು ನೀತಿಯ ಅತ್ಯಂತ ಪ್ರಮುಖ ಸಾಧನವಾಗಿದೆ. ಆರ್‌ಬಿಐ ಈ ದರವನ್ನು ಬದಲಾಯಿಸಿ ಬ್ಯಾಂಕುಗಳ ಸಾಲ ನೀಡುವ ಸಾಮರ್ಥ್ಯದ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ.

ನಿಲುಗಡೆ ಠೇವಣಿ ಸೌಲಭ್ಯ ದರ ಮತ್ತು ಎಂಎಸ್‌ಎಫ್ ದರ: ಇವುಗಳು ರೆಪೊ ದರದೊಂದಿಗೆ ಬಡ್ಡಿದರದ ಸಮತೋಲನವನ್ನು ಕಾಯ್ದುಕೊಳ್ಳಲು ಬಳಸಲಾಗುತ್ತದೆ.

ನಗದು ಮೀಸಲು ಅನುಪಾತ (Cash Reserve Ratio - CRR): ಬ್ಯಾಂಕುಗಳು ಆರ್‌ಬಿಐನಲ್ಲಿ ಕಡ್ಡಾಯವಾಗಿ ಇಡಬೇಕಾದ ಒಟ್ಟು ಠೇವಣಿಗಳ ಪ್ರಮಾಣ.

ಶಾಸನಬದ್ಧ ದ್ರವ್ಯತೆ ಅನುಪಾತ (Statutory Liquidity Ratio - SLR): ಬ್ಯಾಂಕುಗಳು ತಮ್ಮ ಬಳಿ ಕಡ್ಡಾಯವಾಗಿ ನಗದು, ಚಿನ್ನ ಅಥವಾ ಸರ್ಕಾರದ ಭದ್ರತೆಗಳ ರೂಪದಲ್ಲಿ ಇಡಬೇಕಾದ ಸ್ವತ್ತುಗಳ ಪ್ರಮಾಣ.

ಹಣಕಾಸು ನೀತಿ ಸಮಿತಿ (Monetary Policy Committee - MPC) ಹಣಕಾಸು ನೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳಲು 2016 ರಲ್ಲಿ ಹಣಕಾಸು ನೀತಿ ಸಮಿತಿ (ಒಕಅ) ಯನ್ನು ಸ್ಥಾಪಿಸಲಾಯಿತು. ಈ ಸಮಿತಿಯು ಆರು ಸದಸ್ಯರನ್ನು ಒಳಗೊಂಡಿದೆ (ಮೂವರು ಆರ್‌ಬಿಐನಿಂದ ಮತ್ತು ಮೂವರು ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತರು). ಒಕಅ ಯು ಕನಿಷ್ಠ ವರ್ಷಕ್ಕೆ ನಾಲ್ಕು ಬಾರಿ ಸಭೆ ಸೇರಿ, ಆರ್ಥಿಕ ಪರಿಸ್ಥಿತಿಗಳನ್ನು ವಿಶ್ಲೇಷಿಸಿ, ಬಹುಮತದ ಆಧಾರದ ಮೇಲೆ ರೆಪೊ ದರವನ್ನು ನಿರ್ಧರಿಸುತ್ತದೆ. ಆರ್‌ಬಿಐ ಗವರ್ನರ್ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

ಇತ್ತೀಚಿನ ಪ್ರವೃತ್ತಿಗಳು ಮತ್ತು ಮಹತ್ವ: ಇತ್ತೀಚಿನ ವರ್ಷಗಳಲ್ಲಿ, ಹಣದುಬ್ಬರವನ್ನು ಹತೋಟಿಯಲ್ಲಿಡಲು ರೆಪೊ ದರವನ್ನು ಸ್ಥಿರವಾಗಿ ಇಡಲಾಗಿದೆ ಅಥವಾ ಅಗತ್ಯವಿದ್ದಾಗ ಸಣ್ಣ ಪ್ರಮಾಣದಲ್ಲಿ ಮಾರ್ಪಡಿಸಲಾಗಿದೆ. ಪ್ರಸಕ್ತ ಆರ್ಥಿಕ ಸನ್ನಿವೇಶದಲ್ಲಿ, ಹಣಕಾಸು ನೀತಿಯು ಹಣದುಬ್ಬರವನ್ನು ನಿಯಂತ್ರಿಸುವಲ್ಲಿ ಮತ್ತು ಭಾರತೀಯ ಆರ್ಥಿಕತೆಗೆ ಸ್ಥಿರವಾದ ಬೆಳವಣಿಗೆಯ ಪಥವನ್ನು ಒದಗಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಆರ್‌ಬಿಐ ತನ್ನ ನೀತಿಗಳ ಮೂಲಕ ಜಾಗತಿಕ ಆರ್ಥಿಕ ಅನಿಶ್ಚಿತತೆಗಳ ನಡುವೆಯೂ ಭಾರತದ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸತತ ಪ್ರಯತ್ನಗಳನ್ನು ಮಾಡುತ್ತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಆರ್‌ಬಿಐನ ಹಣಕಾಸು ನೀತಿಯು ದೇಶದ ಆರ್ಥಿಕತೆಯ ಬೆನ್ನೆಲುಬಾಗಿದೆ. ರೆಪೊ ದರ ಮತ್ತು ಇತರ ಸಾಧನಗಳ ಸಮರ್ಥ ಬಳಕೆಯ ಮೂಲಕ, ಆರ್‌ಬಿಐ ಹಣದುಬ್ಬರವನ್ನು ನಿಯಂತ್ರಿಸಿ, ಸಾಲದ ವೆಚ್ಚವನ್ನು ನಿರ್ವಹಿಸಿ ಮತ್ತು ಬಂಡವಾಳ ಹೂಡಿಕೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತದೆ. ಈ ನೀತಿಯು ಭಾರತದ ಸಮಗ್ರ ಆರ್ಥಿಕ ಪ್ರಗತಿ ಮತ್ತು ಹಣಕಾಸಿನ ಸ್ಥಿರತೆಗೆ ಅಡಿಪಾಯ ಹಾಕುತ್ತದೆ.

## ಸಾಹಿತ್ಯ ಸಿಂಚನ

ಮೌನ ಲಹರಿ..!

ಮೌನವಾಗಿದ್ದೇನೆಂದರೆ..
ಮಾತುಗಳಿಲ್ಲವೆಂದಲ್ಲ.!
ನಗು ನಗುತ್ತಿದ್ದೇನೆಂದರೆ..
ನೋವುಗಳಿಲ್ಲವೆಂದಲ್ಲ.!
ಈ ಇಳೆಯ ಸಂತೆಯಲಿ
ಸಾವಿರದ ಜಂಜಡಗಳಲಿ
ಸಕಲರಿಗೂ ಅವರದೇ
ಕಂತೆ ಕಂತೆಯಷ್ಟು ಚಿಂತೆ.!

ಇಲ್ಯಾರಿಗಿಹುದು ಹೇಳಿ
ಪರರ ಅಳಲ ಕೇಳುವಷ್ಟು
ವ್ಯವಧಾನದ ಹೊತ್ತು.?
ಸಂತೈಸುವಷ್ಟು ಪುರಸೊತ್ತು?
ಬಾಯ್ಬಿಟ್ಟು ಹೇಳಿದರೂ..
ಕೇಳುವವರಾದರು ಯಾರು?
ವೃಥಾ ಕಾಲ ಕಳೆವಂತಹವರು.!
ಬರಿಯ ಮೊಸಳೆಗಣ್ಣಿನವರು.!

ಹಸಿಹುಸಿ ಕಂಬನಿಯ ಸುರಿಸಿ
ಒಣ ತೃಣಮಾತುಗಳ ಸ್ಫುರಿಸಿ
ಸುಳ್ಳೇ ಅನುಕಂಪ ತೋರಿ
ಸುಮ್ಮನೆದ್ದು ಹೋಗುವರು.!

ಸರಿ ಬೇಡಬಿಡಿ ನಿಮಗೇಕೆ..
ನನ್ನಯ ನೋವಿನ ತುತ್ತು.!
ಇಲ್ಲಿ ಕಾಲಕಿದೆ ಎಲ್ಲವನೂ
ಮರೆಸಿ ಮಣಿಸುವ ತಾಕತ್ತು.!!

ಜಗದೆದುರು ಬೆತ್ತಲಾಗುತ
ಆಗುವುದಕಿಂತ ನಗೆಪಾಟಲು
ಸಹಿಸುವೆ ಅವಡುಗಚ್ಚುತ
ಎಲ್ಲ ನೋವು ಪರಿಪಾಟಲು.!

ಕಿವುಡು ಕುರುಡು ಜನಗಳೆದುರು
ಮೌನವಾಗಿಬಿಡುತ್ತೇನೆ ಸುಮ್ಮನೆ
ಬರಡು ಕೊರಡು ಮನಗಳೆದೆದುರು
ಬಿಕ್ಕದೆ ನಕ್ಕುಬಿಡುತ್ತೇನೆ ಮೆಲ್ಲನೆ.!

ಎ.ಎನ್.ರಮೇಶ್. ಗುಬ್ಬಿ.

ನೈಜ್ಯದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಕೂಸು ಹುಟ್ಟುವ ಮುನ್ನ ಕುಲಾಯಿ ಹೊಲಿಸಿದಂತಾಯ್ತು ಬಳಗಾನೂರು ಪಟ್ಟಣಪಂಚಾಯ್ತಿ ಕಥೆ!



ನೈಜ್ಯ ದೆಸೆ ನ್ಯೂಸ್

ಬಳಗಾನೂರು,ಡಿ,07:- ಅಂದುಕೊಂಡ ಕೆಲಸ ಇನ್ನೂ ಆಗಿರದಿದ್ದರೂ ಅದಕ್ಕೆ ಬೇಕಾದ ತಯಾರಿಯನ್ನು ಅವಸರವಸರವಾಗಿ ಮಾಡಲು ಮುಂದಾದರೆ ಹಳ್ಳಿಕಡೆ ಯಾಕಂಗ ಅವಸ್ರ ಮಾಡ್ತಿ ಕೂಸು ಹುಟ್ಟಾಕಿಂ-ತ ಮುಂಚೆ ಕುಲಾಯಿ ಯಾಕ ಹೊಲಸ್ತಿ ಎಂಬ ಗಾದೆ ಮಾತಿದೆ.ಬಳಗಾನೂರು ಪಟ್ಟಣ ಪಂಚಾಯ್ತಿಯ ಕಥ-ಯೂ ಅದರಂತಾಗಿದೆ.ಪಟ್ಟಣದ ಸಂತೆಬಜಾರದಿಂದ ಹಾದುಹೋಗುವ ಮಸ್ಕಿ ಬಳಗಾನೂರು ಮುಖ್ಯರಸ್ತೆಯ ಪಕ್ಕದಲ್ಲಿ ಸುಮಾರು ಮೂವತ್ತು ನಲವತ್ತು ವರ್ಷಗಳಿಂದ ಬಡ ಬೀದಿಬದಿ ವ್ಯಾಪಾರಿಗಳು ಸಣ್ಣ ಸಣ್ಣ ಕ್ಷೌರದ,ಇಸ್ತ್ರಿ,ಟೇಲರ್,ಪಾದರಕ್ಷೆ ಹೊಲಿಯುವ,ವಾಹನಗಳ ಬಿಡಿಭಾಗಗಳನ್ನು ಮಾರುವ ಅಂಗಡಿಗಳನ್ನು ನಿರ್ಮಿಸಿಕೊಂಡು ದೈನಂದಿನ ಜೀವನವನ್ನು ಸಾಗಿಸುತ್ತಾ ಬಂದಿದ್ದರು.ಆದರೆ ಪಟ್ಟಣಪಂಚಾಯ್ತಿಯ ಅಧಿಕಾ-ರಿಗಳು ನೂತನ ಬಸ್ ನಿಲ್ದಾಣ ನಿರ್ಮಿಸುವ ನೆಪವೊಡ್ಡಿ ಏಕಾಏಕಿ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸುವಂತೆ ಆದೇಶಿಸಿ ಅವರನ್ನು ಬೀದಿಪಾಲು ಮಾಡಿದರು.ಈಗ ಒಂದುವರ್ಷ ಕಳೆಯುತ್ತಿದ್ದರೂ ಮಳಿಗೆಗಳನ್ನು ನಿರ್ಮಿಸಿಲ್ಲ.ಅವರಿದ್ದ ಅಂಗಡಿಗಳಿಗೆ ಮಾಸಿಕ ಬಾಡಿಗೆಯನ್ನು ಬೇಕಾದರೆ ನೀಡುತ್ತೇವೆಂದು ಅಂಗಲಾಚಿದರೂ ಕೇಳದೆ ಒಕ್ಕಲೆಬ್ಬಿಸಿದ್ದಾರೆ. ಈಗ ನಾವು ಬಡವರು ಏನುಮಾಡಬೇಕು? ನಮಗೊಂದು ಸೂರು ನೀಡಿ,ಕಾಯಕ ಮಾಡಲು ಅಂಗಡಿಗಳನ್ನು ನೀಡಿ ಎಂದು ಸಂತ್ರಸ್ತರು ಮಾಧ್ಯಮದ ಮೂಲಕ ಆಗ್ರಹಿಸುತ್ತಿದ್ದಾರೆ.ತೆರವುಗೊಳಿಸಿದ ತಕ್ಷಣ ಮಳಿಗೆಗಳನ್ನು ನಿರ್ಮಿಸಿ ಬಾಡಿಗೆ ನಿಗದಿಮಾಡಿದ್ದರೆ ಪಟ್ಟಣಪಂಚಾಯ್ತಿಗೆ ಆದಾಯವಾದರೂ ಬರುತ್ತಿತ್ತು ಆ ವ್ಯಾಪಾರಸ್ತರಿಗೆ ಜೀವನಮಾಡಲು ಮತ್ತೆ ಅವಕಾಶವಾದರೂ ಸಿಗುತ್ತಿತ್ತು. ಈಗ ಅದಾವುದೂ ಇಲ್ಲದೆ ಜಾಗ ಕಾಲಿಬಿದ್ದಿದೆ.ಅಲ್ಲಿ ವಾಹನಗಳು,ಬಂಡಿಗಳು ನಿಲ್ಲಿಸುವ ನಿಲ್ದಾಣವಾಗಿ ರೂಪಗೊಂಡಿದೆ.ಮಳಿಗೆ ನಿರ್ಮಾಣ ತಡವಿದ್ದರೆ ತರಾತುರಿಯಲ್ಲಿ ಬಡವರನ್ನು ಒಕ್ಕಲೆಬ್ಬಿಸುವ ಅವಶ್ಯಕತೆಯಾದರೂ ಏನಿತ್ತು ಎಂದು ಅಂಗಡಿಗಳನ್ನು ಕಳೆದುಕೊಂಡ ಹುಸೇನಪ್ಪ,ನಿರುಪಾದಿ ಮಡಿವಾಳರ್,ರಾಮಮ್ಮ ಮಡಿವಾಳರ್,ಮತ್ತು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.ಈಗಲಾದರೂ ಪಟ್ಟಣಪಂಚಾಯ್ತಿಯ ಅಧಿಕಾರಿಗಳು ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ಮಳಿಗೆಗಳನ್ನು ನಿರ್ಮಿಸಿ ಬಾಡಿಗೆಗೆ ನೀಡಿದರೆ ಮತ್ತೆ ಅವರು ಬದುಕನ್ನು ಕಟ್ಟಿಕೊಳ್ಳಬಹುದು.

## ಮಾಜಿ ಸಚಿವ ಬಯ್ಯಾಪುರರ 72ನೇ ಹುಟ್ಟುಹಬ್ಬದ ಪ್ರಯುಕ್ತ ಉಚಿತ ನೇತ್ರ ತಪಾಸಣೆ, ಚಿಕಿತ್ಸಾ ಶಿಬಿರದಲ್ಲಿ 350ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಶತ್ರು ಚಿಕಿತ್ಸೆ

ನೈಜ್ಯ ದೆಸೆ ನ್ಯೂಸ್




ಲಿಂಗಸುಗೂರು : ಡಿ 7, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ ಅವರ 72ನೇ ಹುಟ್ಟುಹಬ್ಬದ ಪ್ರಯುಕ್ತ ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿರುವ ಉಚಿತ ನೇತ್ರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರದಲ್ಲಿ 500 ಜನರು ಕಣ್ಣಿನ ತಪಾಸಣೆ ಮತ್ತು ಇದರಲ್ಲಿ 350 ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಪಡೆದಿದ್ದಾರೆಂದು ಅನ್ನದಾನಗೌಡ ಬಯ್ಯಾಪುರ ಆಸ್ಪತ್ರೆ ವೈದ್ಯ ಡಾ. ನಾಗನಗೌಡ ಪಾಟೀಲ್ ಬಯ್ಯಾಪುರ ಹೇಳಿದರು. ಅನ್ನದಾನಗೌಡ ಬಯ್ಯಾಪುರ ಪ್ರತಿಷ್ಠಾನ , ಅಮರೇಗೌಡ ಪಾಟೀಲ್ ಬಯ್ಯಾಪುರ ಅಭಿಮಾನಿಗಳ ಬಳಗ, ಸ್ವಾಮಿ ವಿವೇಕಾನಂದ ಸೇವಾಶ್ರಮ ಬೆಂಗಳೂರು, ಜಿಲ್ಲಾ ಅಂದತ್ವ ನಿವಾರಣಾ ಸಂಘ ರಾಯಚೂರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಇವರುಗಳ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಡಿ 5 ಮತ್ತು 6 ರಂದು ಶಿಬಿರ ನಡೆಯಿತು. ಈಶ್ವರ ದೇವಸ್ಥಾನದಲ್ಲಿ ರೋಗಿಗಳ ಮಣ್ಣಿನ ತಪಾಸಣೆ ನಡೆಸಿದರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆ ನಡೆಸಲಾಯಿತು ಕಣ್ಣಿನ ಶತ್ರು ಚಿಕಿತ್ಸೆ ಪಡೆದ ವಿಶ್ರಾಂತಿ ಪಡೆಯುತ್ತಿದ್ದ ರೋಗಿಗಳಿಗೆ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದರು. ಮುಖ್ಯ ವೈದ್ಯಾಧಿಕಾರಿ ಡಾ. ರುದ್ರಗೌಡ ಪಾಟೀಲ್ ಮುಖಂಡರಾದ ಪಾಮಯ್ಯ ಮುರಾರಿ, ಬಸವರಾಜ್ ಗಣೆಕಲ್, ಸೋಮಶೇಖರ ಐದುನಾಳ, ಮಹಾಂತೇಶ್ ಪಾಟೀಲ್, ಶಂಕರಗೌಡ ಬಳಗಾನೂರ, ಶರಣಬಸವ ವಾರದ, ಚೆನ್ನ ರೆಡ್ಡಿ ಬಿರಾದರ್, ನಾಗರಾಜ ತಿಮ್ಮಣ್ಣ ಸೇರಿದಂತೆ ಇತರರು ಇದ್ದರು

## ಹಟ್ಟಿ ಚಿನ್ನದ ಗಣಿಗೆ ಆಗಮಿಸಿದ ಭಾರತ ಕಮ್ಯುನಿಸ್ಟ್ ಪಕ್ಷದ ಜಾಥಾ.ಎಐಟಿಯುಸಿ ಯಿಂದ ಭವ್ಯ ಸ್ವಾಗತ.

ನೈಜ್ಯ ದೆಸೆ ನ್ಯೂಸ್




ಸಮತಾ ರಾಜ್ಯದ ಕನಸುಗಳೊಂದಿಗೆ..ಶ್ರಮ ಶಕ್ತಿಯ ಸಂಘರ್ಷದ ಶತಮಾನದ ಪಯಣ.ಹಟ್ಟಿ ಚಿನ್ನದ ಗಣಿ:ಸಿಪಿಐ ಶತಮಾನೋತ್ಸವ ಜಾಥಾವ ಇಂದು ಹಟ್ಟಿ ಚಿನ್ನದ ಗಳಿಗೆ ಆಗಮಿಸಿತು.ಭಾರತ್ ಕಮ್ಯುನಿಸ್ಟ್ ಪಕ್ಷವು ನಡೆಸುತ್ತಿರುವ ಸಮರಶೀಲ ಹೋರಾಟ ಇದೇ ತಿಂಗಳು ಡಿಸೆಂಬರ್ 26-2025 ಕ್ಕೆ 100 ವರ್ಷ ಪೂರೈಸುತ್ತದೆ.ಕಾಖಖಸಾತಿ ಸುಂದರೇಶ ರಾಜ್ಯ ಕಾರ್ಯದರ್ಶಿ ಇವರ ನೇತೃತ್ವದಲ್ಲಿ.ಶತಮಾನೋತ್ಸವ ಜಾಥಾವು ಇಂದು ಹಟ್ಟಿ ಚಿನ್ನದ ಗಣಿಗೆ ಆಗಮಿಸಿದ ಹಿನ್ನೆಲೆಯಲ್ಲಿ ಹಟ್ಟಿ ಘಟಕದ ಎಐಟಿಯುಸಿ ಪದಾಧಿಕಾ-ರಿಗಳು ಹಾಗೂ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತ ಮಾಡಿಕೊಂಡರು.ಭಾರತ ಕಮ್ಯುನಿಸ್ಟ್ ಪಕ್ಷ ಭಾರತದ ದುಡಿಯುವ ಜನರ ಮೊಟ್ಟ ಮೊದಲ ರಾಜಕೀಯ ಪಕ್ಷ ದೇಶ ಜಮೀನ್ದಾ-ರೀ,ಸಾಮ್ರಾಜ್ಯಶಾಹಿ ವ್ಯವಸ್ಥೆಯ ಕಪಿಮುಷ್ಠಿಯಲ್ಲಿ ಬಳಲುತ್ತಿದಾಗ 1925ರಲ್ಲಿಯೇ ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾಯಿತು.ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷ್,ಪೋರ್ಚುಗೀಸ್,ಫ್ರೆಂಚ್ ಸಾಮ್ರಾಜ್ಯಶಾಹಿಗಳ ವಿರುದ್ಧ ಮತ್ತು ಅವರ ಜೊತೆ ಕೈಜೋಡಿಸಿದ್ದ ಭಾರತದ ಬಂಡವಾಳಶಾಹಿಗಳ ಮತ್ತು ಪಾಳೇಗಾರರ ವಿರುದ್ಧ ನಿರಂತರ ಹೋರಾಟವನ್ನು ಭಾರತ ಕಮ್ಯುನಿಸ್ಟ್ ಪಕ್ಷ ನಡೆಸಿತು. ಎನ್ನುವಂತ ಹಿನ್ನೆಲೆಯಲ್ಲಿ.ಇಂದು ಈ ಜಾತವನ್ನು ಉದ್ದೇಶಿಸಿ ಕಾರ್ಯಕಾರಿ ಮಂಡಳಿ ಸದಸ್ಯರಾದ ಕೆ ಎಸ್ ಜನಾರ್ಧನ್ ಮಾತನಾಡಿ ಜನರ ಮಧ್ಯೆ ಜನರಿಗೋಸ್ಕರ ನಡೆಯುವಂತ ಈ ಜಾಥಾವನ್ನು ಜನರೇ ಮುನ್ನಡೆಸಬೇಕಾಗಿದೆ.ಭಾರತ ಕಮಿಷ್ ಪಕ್ಷದ ವಿಚಾರವನ್ನು ಇಲ್ಲಿ ಕೇಳಿ ಬಿಟ್ಟು ಹೋಗುವುದಲ್ಲ.ನೀವು ಮನೆಗಳಲ್ಲಿ,ನಿಮ್ಮ ಕೇ-ರಿಗಳಲ್ಲಿ,ನಿಮ್ಮ ಊರುಗಳಲ್ಲಿ, ಕಮಿನಿಸ್ಟ್ ಪಕ್ಷದ ವಿಚಾರವನ್ನು ನೀವು ಹೇಳಬೇಕು.ಹಿಂದೆ ಜಾತಿ ಜಾತಿಗಳಿಂದ ಸಂಘರ್ಷಗಳಾಗಿ ನಮ್ಮ ಮಕ್ಕಳು ಮನೆಗೆ ಇದ್ದಿರುತ್ತಾರೆ ಎನ್ನುವಂತ ಗ್ಯಾರಂಟಿ ಇಲ್ಲ.ಹಳ್ಳಿಗಳಲ್ಲಿ ಕೊಲೆಗಳಾಗುತ್ತವೆ ಸತ್ತವರು ಎಂಎಲ್ಎ ಎಂಪಿ ಮಕ್ಕಳಲ್ಲ. ಸತ್ತವರು ಜನಸಾಮಾನ್ಯ ದುಡಿಯುವ ವರ್ಗದ ಮಕ್ಕಳು. ಶ್ರಮಶಕ್ತಿಯ ಮೂಲಕ ನಾವು ಇವತ್ತು ನಮ್ಮ ಬದುಕು ಕಟ್ಟಿಕೊಳ್ಳಬೇಕಾಗಿದೆ.ನಾವೆಲ್ಲರೂ ಒಂದುಗೂಡಬೇಕಾಗಿದೆ.ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ 100 ವರ್ಷವಾಗಿದೆ.ಹಟ್ಟಿ ಚಿನ್ನದ ಗಣಿಯ ಎಐಟಿಯುಸಿ ಸಂಘಟನೆ ಹಟ್ಟಿ ಘಟಕದಿಂದ ನಮಗೆ ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ಹಟ್ಟಿ ಘಟಕ ಹಾಗೂ ರಾಯಚೂರು ಘಟಕದ ಪಕ್ಷದ ನಾಯಕರುಗಳಿಗೆ ಹಾಗೂ ಎಲ್ಲಾ ನಾಗರಿಕರಿಗೆ ಕಮ್ಯುನಿಸ್ಟ್ ಪಕ್ಷದಿಂದ ವಂದನೆ ಸಲ್ಲಿಸಿದರು.ಹಟ್ಟಿ ಘಟಕದ ಎಐ-ಟಿಯುಸಿ ಮುಖಂಡರಾದ ಕಾಟಟ ಚಂದ್ರಶೇಖರ್ ಮಾತನಾಡಿ ಭಾರತ್ ಕಮ್ಯುನಿಸ್ಟ್ ಪಕ್ಷವು ಇದೇ ತಿಂಗಳು 26ಕ್ಕೆ 100 ವರ್ಷ ಪೂರೈಸುತ್ತದೆ ಅದ್ದೂರಿಯಾಗಿ ಸಂಭ್ರಮಾಚರಣೆಯನ್ನು ಆಚ-ರಿಸುತ್ತದೆ.1925 ರಲ್ಲಿ ಸ್ಥಾಪನೆಯಾದ ಭರತ್ ಕಮ್ಯುನಿಸ್ಟ್ ಪಕ್ಷ ಹಲವಾರು ಚಳುವಳಿಗಳನ್ನೂ ಮಾಡುತ್ತಾ ಬಂದಿದೆ.1927ರಲ್ಲಿ ಹಟ್ಟಿ ಚಿನ್ನದ ಗಣಿಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಜೊತೆಗೆ ಹಟ್ಟಿ ಚಿನ್ನದ ಗಣಿಯಲ್ಲಿ ಎಐ-ಟಿಯುಸಿ ಪಕ್ಷವು ಸ್ಥಾಪನೆ ಆಗಿದೆ.ಅಲ್ಲಿಂದ ಹಲವಾರು ವರ್ಷಗಳ ಕಾಲ ಎಐ-ಟಿಯುಸಿ ಹಾಗು ಭಾರತ್ ಕಮ್ಯುನಿಸ್ಟ್ ಪಕ್ಷಗಳು ಹಲವಾರು ಹೋರಾಟಗಳನ್ನು ಮಾಡಿವೆ.ಈ ಒಂದು ದಿಶಿಯಲ್ಲಿ ಭಾರತ್ ಕಮ್ಯುನಿಸ್ಟ್ ಪಕ್ಷಕ್ಕೆ ಡಿಸೆಂಬರ್ 26ಕ್ಕೆ 100 ವರ್ಷ ತುಂಬಿದೆ.ಶ್ರಮ ಶಕ್ತಿಯ ಸಂಘರ್ಷದ ಶತಮಾನದ ಪಯಣಕ್ಕೆ ನಾವು ನೀವೆಲ್ಲರೂ ಸಾಕ್ಷಿಗಳಾಗೋಣ ಎಂದು ಮಾತನಾಡಿದರು.ಅದೇ ರೀತಿ ಜಿಎಸ್ ಹನುಮಂತ.ಹಾಗೂ ಕಾಮ್ರೆಡ್ ಸಾತಿ ಸುಂದರೇಶ್ ರಾಜ್ಯ ಕಾರ್ಯದರ್ಶಿ ಜಾಥಾವನ್ನು ಉದ್ದೇಶಿಸಿ ಮಾತನಾಡಿದರು.ಈ ಸಂದರ್ಭದಲ್ಲಿ ಕಾಖಖಚಂದ್ರಶೇಖರ್.ತಿಪ್ಪಣ್ಣ ಮಾಚನೂರು. ಗಂಗಪ್ಪ ಶಕೋದಿ.ಜಿಎಸ್ ಹನುಮಂತ. ಅಮೀರ್ ಪಾಷಾ.ರಂಗನಾಥ. ಸಲೀಂ ಪಾಷಾ ಹಾಗೂ ಎಐಟಿಯುಸಿ ಕಾರ್ಯಕರ್ತರು ಈ ಜಾಥಾಕದಲ್ಲಿ ಭಾಗವಹಿಸಿದ್ದರು.ಕರ್ನಾಟಕದ ಕಯ್ಯೂರು ರೈತ ಹೋರಾಟ, ಚಿತ್ರಾಗಾಂಗನ ಹೋರಾಟ, ತೆಲಂಗಾಣ ಸಶಸ್ತ್ರ ರೈತ ಹೋರಾಟ, ಪುನ್ನ ಪ್ರವಯಲಾರ್ ಸಮರ, ತೇಭಾಗ ರೈತ ಚಳುವಳಿ, ರಾಯಲ್ ಇಂಡಿಯನ್ ನೌಕಾ ಬಂಡಾಯ, ಗೋವಾ ವಿಮೋಚನಾ ಚಳುವಳಿ, ಪುದುಚೇರಿ ಸ್ವಾತಂತ್ರ್ಯ ಹೋರಾಟ ಇಂತಹ ನೂರಾರು ಹೋರಾಟಗಳಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸಾವಿರಾರು ನಾಯಕರು, ಸದಸ್ಯರು ತಮ್ಮ ಪ್ರಾಣವನ್ನು ಕೊಟ್ಟಿದ್ದಾರೆ. ಲಕ್ಷಾಂತರ ಕಾರ್ಯಕರ್ತರು ಜೈಲುವಾಸ ಅನುಭವಿಸಿದ್ದಾರೆ. ಭೂಗತವಾಗಿ ಸಾಮ್ರಾಜ್ಯಶಾಹಿ ಹಾಗೂ ಅವರ ಗುಲಾಮಿ ಜಮೀನ್ದಾರ, ಪಾಳೇಗಾರರ, ಬಂಡವಾಳಗಾರರ ವಿರುದ್ಧ ಹೋರಾಡಿ ಭಾರತದ ಸ್ವಾತಂತ್ರ್ಯಕ್ಕಾಗಿ, ಬಡವರಿಗೆ, ರೈತ, ಕಾರ್ಮಿಕ-ರಿಗೆ, ಸಾಮಾನ್ಯ ಜನರಿಗೆ ಸ್ವಾತಂತ್ರ್ಯ ಲಭಿಸಲು ನಿರಂತರವಾಗಿ ಶ್ರಮಿಸಿದ್ದಾರೆ. ಸ್ವಾತಂತ್ರ್ಯ ನಂತರವೂ ಪಡೆದ ಸ್ವಾತಂತ್ರ್ಯವನ್ನು ಜನಸಾಮಾನ್ಯರಿಗೆ ತಲುಪಿಸಲು ಜಾತಿಯಿಲ್ಲದ, ಮತಧರ್ಮಗಳ ಸಂಘರ್ಷವಿಲ್ಲದ, ಮೇಲುಕೀಳುಗಳಿಲ್ಲದ, ಶಾಂತಿ, ಸಹಬಾಳ್ವೆ, ಸೌಹಾರ್ದತೆಯ ಜೊತೆಗೆ ಸಮತಾ ರಾಜ್ಯದ ಕನಸುಗಳೊಂದಿಗೆ ಭಾರತ ಕಮ್ಯುನಿಸ್ಟ್ ಪಕ್ಷ ನಡೆಸುತ್ತಿರುವ ಸಮರ ಶೀಲ ಹೋರಾಟ ಈ ಡಿಸೆಂಬರ್ 26, 2025ಕ್ಕೆ 100 ವರ್ಷ ಪೂರೈಸುತ್ತಿದೆ.ಪ್ರಸ್ತುತ ನಮ್ಮ ದೇಶದಲ್ಲಿ ರಾಜ್ಯದಲ್ಲಿ ಕೋಮುವಾದಿ ಪಕ್ಷ, ಸಂಘಟನೆಗಳು ಕಾರ್ಪೊರೇಟ್ (ಅಂದರೆ ಶ್ರೀಮಂತ ಕಂಪನಿಗಳು) ನಮ್ಮ ಜನರ ಸ್ವಾತಂತ್ರ್ಯವನ್ನು ನಾಶ ಮಾಡಿವೆ. ಬಡತನ, ನಿರುದ್ಯೋಗ, ಅತ್ಯಾಚಾರ, ಭ್ರಷ್ಟಾಚಾರ, ರೈತರ ರೈತ ಆತ್ಮಹತ್ಯೆ, ಕಾರ್ಮಿಕರ ಹಕ್ಕುಗಳ ನಾಶ, ವಿದ್ಯಾರ್ಥಿ ಯುವಜನರಲ್ಲಿ ಹತಾಶೆ, ನೆಲ ಜಲ ದೇಶದ ಮತ್ತು ರಾಜ್ಯದ ಸಾರ್ವಜನಿಕ ಸಂಪತ್ತಿನ ಲೂಟಿ ಹೆಚ್ಚುತ್ತಲೇ ಇದೆ. ಕೋಮುವಾದ, ಜಾತಿವಾದ ತಾಂಡವಡುತ್ತಿದೆ. ಇಂತಹ ಸಂದರ್ಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳೆಯರ, ದಲಿತ, ಅಲ್ಪಸಂಖ್ಯಾತ, ಆದಿವಾಸಿ, ಸಾಹಿತ್ಯ ಸಾಂಸ್ಕೃತಿಕ ಜನ ಸಂವಾದ ಸಂಘಟನೆಗಳೊಂದಿಗೆ ಕರ್ನಾಟಕ ರಾಜ್ಯದಾದ್ಯಂತ ಈ ಜಾಥಾ ನಡೆಸುತ್ತಿದೆ.ಬನ್ನಿ ಸಮತಾ ರಾಜ್ಯದ ಕನಸನ್ನು ನನಸು ಮಾಡೋಣ ನಿಮ್ಮೆಲ್ಲರ ಸಹಾಯ ಸಹಕಾರ ಈ ಶತಮಾನದ ಹೋರಾಟದ ಜೊತೆ ಇರಲಿ

## ಸೇವಾಶ್ರಮದ ಮಕ್ಕಳಿಗೆ ಜಾಗೃತಿ ಸಭೆ



ನೈಜ್ಯ ದೆಸೆ ನ್ಯೂಸ್

ಕವಿತಾಳ:- ಪಟ್ಟಣದ ಸೇವಶ್ರಮದ ಮಕ್ಕಲೀಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಜಾಗೃತಿ ಸಭೆಯನ್ನು ಏರ್ಪಡಿಸಲಾಗಿತ್ತು . ಮಕ್ಕಳ ರಕ್ಷಣಾ ಘಟಕದ ಸಂಯೋಜಕ ಮೋಹನ್ ಅವರು ಮಾತನಾಡಿ 'ಮಕ್ಕಳ ಭವಿಷ್ಯ ಹೂವಿತಂತೆ ಇದ್ದು ಅದನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರೀಕರದಾಗಿದ್ದು ಮಕ್ಕಳ ನಗೆ ಅವರ ಭವಿಷ್ಯ ಮತ್ತು ಸುರಕ್ಷತೆ ನಮ್ಮ ಸಮಾಜದ ಕೈಯಲ್ಲಿದ್ದು ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸುವಲ್ಲಿ ಪಾಲಕ-ಪೋಷಕರು ಮತ್ತು ಪ್ರತಿಯೊಬ್ಬ ಜವಬ್ದಾರಿಯುತ ನಾಗರೀಕರು ಮುಂದಾಗಬೇಕಿದೆ' ಎಂದರು.ಸೇವಾಶ್ರಮದ ಸಿಸ್ಟರ್ ಮೆಬಲ್ ಮತ್ತಿತರರು ಇದ್ದರು.

## ತಂಬಾಕು ಮುಕ್ತ ಯುವ ಅಭಿಯಾನ-ಸ್ವಯಂ ಪ್ರೇರಿತವಾಗಿ ತಂಬಾಕು ಉತ್ಪನ್ನಗಳ ಬಳಕೆಗೆ ನಿಯಂತ್ರಣ ಹಾಕಿಕೊಳ್ಳಬೇಕು: ಡಾ ಸುನೀತಾ.



ನೈಜ್ಯ ದೆಸೆ ನ್ಯೂಸ್

ರಾಯಚೂರು: ತಂಬಾಕಿನ ಬಳಕೆಯಿಂದಾಗಿ ಕ್ಯಾನ್ಸರ್ ಸೇರಿದಂತೆ ದೇಹದ ಬಹುತೇಕ ಎಲ್ಲಾ ಅಂಗಾಂಗಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದ್ದು ಇದನ್ನು ನಾವೆಲ್ಲರೂ ತಿಳಿಸಬೇಕಿದೆ ಎಂದು ಮಡ್ಡಿಪೇಟೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾದಿಕಾರಿ ಡಾ.ಸುನೀತಾ ತಿಳಿಸಿದರು. ಜಿಲ್ಲಾಡಳಿತ ಜಿಲ್ಲಾಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲುಕಾ ಆರೋಗ್ಯಾಧಿಕಾ-ರಿಗಳ ಕಾರ್ಯಾಲಯದ ಮೂಲಕ ರಾಯಚೂರು ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣ (ಗಂಜ) ಹಾಗೂ ಬಸನಬಾವಿ ವೃತ್ತದಲ್ಲಿ ಶೃತಿ ಸಂಸ್ಕೃತಿ ಸಂಸ್ಥೆ ತಂಡದಿಂದ ಹಮ್ಮಿಕೊಂಡ ಬೀದಿ ನಾಟಕ ಪ್ರದರ್ಶನ ವೇಳೆ ಮಾತನಾಡುತ್ತಾ,ಮುಖ್ಯವಾಗಿ ಸಂತಾನಭಿವೃದ್ಧಿಗೆ ದಕ್ಕೆಯಾಗುವ ಪುರುಷರಲ್ಲಿ ವಿಕೃತ ವಿರ್ಯಾಣು ಉತ್ಪಾದನೆ, ಮಹಿಳೆಯರಲ್ಲಿ ಬಂಜೆತನಕ್ಕೆ ಕಾರಣವಾಗುವ ಮೂಲಕ ಸಂತಾನಭಿವೃದ್ಧಿಗೆ ಮಾರಕವಾಗುತ್ತವೆ. ಈ ದಿಶೆಯಲ್ಲಿ ಯುವಜನತೆ ಇಂದಿನಿಂದಲೆ ತಂಬಾಕು ಉತ್ಪನ್ನಗಳ ಬಳಕೆಯಿಂದ ದೂರವಾಗಲು ಮನವಿ ಮಾಡಿದರಲ್ಲದೆ ಅಗತ್ಯ ಇರುವವರಿಗೆ ಆಪ್ತ ಸಮಾಲೋಚನೆಯನ್ನು ರಿಮ್ಸ್ ಆಸ್ಪತ್ರೆಯ "ಬಿ ಬ್ಲಾಕ್" ಕೊಠಡಿ ಸಂಖ್ಯೆ 27 ರಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.ಪ್ರತಿಜ್ಞೆ: ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ರವರು ನಶೆ ಮುಕ್ತ ಭಾರತ ಅಡಿಯಲ್ಲಿ ಮಾದಕ, ಪದಾರ್ಥ, ತಂಬಾಕು ಬಳಕೆ ತ್ಯಜಿಸುವ ಕುರಿತು ಪ್ರತಿಜ್ಞೆ ಬೋಧಿಸಿದರು.ಈ ಸಂಧರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಶಿಕ್ಷಣಾಧಿಕಾರಿ, ಬಸಯ್ಯ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ತಂಬಾಕು ಕೋಶದ ಅನ್ನಪೂರ್ಣ ಬಾಯಿ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ವಸಂತಕುಮಾರಿ, ಮಂಜುಳಾ, ತಾರಾ, ಪವಿತ್ರಾ, ಕಲಾ ತಂಡದ ಡಿಂಗ್ರಿ ನರಸಪ್ಪ ಸೇರಿದಂತೆ ಆಶಾ ಕಾರ್ಯಕರ್ತೆಯರು ಸಾರ್ವಜನಿಕರು ಹಾಜರಿದ್ದರು.

## ಅಬಕಾರಿ ಸಚಿವ ಆರ್.ತಿಮ್ಮಾಪುರರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್



ಮಸ್ಕಿ : ಪಟ್ಟಣಕ್ಕೆ ಆಗಮಿಸಿದ್ದ ಅಬಕಾರಿ ಸಚಿವ ಆರ್. ತಿಮ್ಮಾಪುರ ಅವರಿಗೆ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸಿದರು.ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಮಲ್ಲಯ್ಯ ಬಳ್ಳಾ. ದುರ್ಗಪ್ರಸಾದ.ಅಶೋಕ ಮುರಾರಿ. ಹನುಮೇಶ ಗುರು.ಶ್ರೀಕಾಂತ್ ಮುರಾರಿ.ಕಾಸಿಂ ಮುರಾರಿ ಕಿರಣ ಮುರಾರಿ.ಗಂಗಾಧರ ಮುರಾರಿ.ರಂಜಿತ್. ಪ್ರಶಾಂತ. ಅಮರೇಶ ಮಲ್ಕಾಪೂರುಸೇರಿದಂತೆ ಇತರರು ಇದ್ದರು.

## ನೇಮಕಾತಿ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕರ್ನಾಟಕ ಪೋಸ್ಟ್ ಹೆಸರು ಸೆಕ್ರೆಟರಿಯಲ್ ಅಸಿಸ್ಟೆಂಟ್ ಖಾಲಿ ಹುದ್ದೆಗಳ ಸಂಖ್ಯೆ 4 ಹುದ್ದೆಗಳು ಅರ್ಹತೆ ಎಸ್‌ಎಸ್–ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಕೊನೆಯ ದಿನಾಂಕ: 23–ಡಿಸೆಂಬರ್–2025 ಅರ್ಜಿ WCD ಕರ್ನಾಟಕ ನೇಮಕಾತಿ 2025 – 4 ಕಾರ್ಯದರ್ಶಿ ಸಹಾಯಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ WCD ಕರ್ನಾಟಕ ನೇಮಕಾತಿ 2025: 4 ಕಾರ್ಯದರ್ಶಿ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಡಿಸೆಂಬರ್ 2025 ರ WCD ಕರ್ನಾಟಕ ಅಧಿಕೃತ ಅಧಿಸೂಚನೆಯ ಮೂಲಕ ಕಾರ್ಯದರ್ಶಿ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 23–ಡಿಸೆಂಬರ್–2025 ರಂದು ಅಥ–ವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಅಧಿಕೃತ ವೆಬ್‌ಸೈಟ್: dwcd.karnataka.gov.in ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 01–12–2025
ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ

ದಿನಾಂಕ: 23–ಡಿಸೆಂಬರ್–2025

## ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಯುವ ಬರಹಗಾರರ ಚೊಚ್ಚಲ ಕೃತಿಗೆ ಧನಸಹಾಯಕ್ಕಾಗಿ ಅರ್ಜಿ ಆಹ್ವಾನ

ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2025–26ನೇ ಸಾಲಿನ ಯುವಬರಹಗಾರರ ಚೊಚ್ಚಲ ಕೃತಿಗಳನ್ನು ಪ್ರಕಟಿಸಲು ಪ್ರೋತ್ಸಾಹಧನ ನೀಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಆಯ್ಕೆಯಾದ 50 ಯುವ ಬರಹಗಾರರ ಹಸ್ತಪ್ರತಿಗಳ ಪ್ರಕಟಣೆಗೆ ಮಾತ್ರ ರೂ.15,000–00ಗಳ ಪ್ರೋತ್ಸಾಹಧನ ನೀಡಲಾಗುವುದು. ಅರ್ಜಿದಾರರು 18 ರಿಂದ 40 ವರ್ಷ ವಯೋಮಿತಿಯವರಾಗಿರಬೇಕು. ಸ್ವ–ವಿವರವುಳ್ಳ ಪ್ರಾಧಿಕಾರದ ಅರ್ಜಿ ನಮೂನೆಯೊಂದಿಗೆ ದೃಢೀಕೃತ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರದ ಪ್ರತಿ ಅಥವಾ ಅಧಿಕೃತವಾದ, ದೃಢೀಕ–ರಿಸಲ್ಪಟ್ಟ ಜನ್ಮದಾಖಲಾತಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು. ಅಲ್ಲದೆ ಪ್ರಸ್ತುತ ಸಲ್ಲಿಸಲ್ಪಡುತ್ತಿರುವ ಕೃತಿಯು ತಮ್ಮ ಚೊಚ್ಚಲ ಕೃತಿಯಾಗಿದ್ದು, ಎಲ್ಲಿಯೂ ಪ್ರಕಟವಾಗಿಲ್ಲವೆಂದು ಸ್ವಯಂ ದೃಢೀಕರಣ ನೀಡಬೇಕು.ಆಯ್ಕೆಗಾಗಿ ಸಲ್ಲಿಸುವ ಹಸ್ತಪ್ರತಿಯು ಡಿ.ಟಿ.ಪಿ.ಮಾಡಿಸಿದಾಗ 1/8 ಡೆಮ್ಮಿ ಅಳತೆಯಲ್ಲಿ ಕನಿಷ್ಠ 60 ಪುಟಗಳಿರಬೇಕು. ಅನುವಾದ, ಪಠ್ಯಪುಸ್ತಕ ಹಾಗೂ ಬೇರಾವುದೇ ಪದವಿ / ಸ್ನಾತಕೋತ್ತರ ಪದವಿ(ಕಊಆ)ಗೆ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧಗಳನ್ನು ಹೊರತುಪಡಿಸಿ, ಕಥೆ, ಕಾದಂಬರಿ, ಕವನ, ನಾಟಕ, ವಿಮರ್ಶಾ ಲೇಖನ, ಪ್ರಬಂಧ ಮುಂತಾದ ಕನ್ನಡ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಸ್ತಪ್ರತಿ ಇರಬೇಕು. ಕೃತಿಯ ಪಠ್ಯದಲ್ಲಿ ಯಾವುದೇ ಧರ್ಮ, ದೇವರು, ಜಾತಿ, ಕೋಮು, ವೃತ್ತಿ, ಸಮುದಾಯ, ಭಾಷೆ, ಆಚರಣೆ, ಪದ್ಧತಿ, ಇತ್ಯಾದಿ ಸಂಗತಿಗಳಿಗೆ ಸಂಬಂಧಿಸಿದಂತೆ ಹಾಗೂ ರಾಷ್ಟ್ರೀಯ ನಾಯಕರುಗಳ ಕು–ರಿತಂತೆ ನೇರವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಮನನೋಯಿಸುವಂತಹ ವಿಷಯವಾಗಲಿ ಇರಬಾರದು. ಅಲ್ಲದೆ ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವಂತಹ ವಿಷಯ / ಸಂಗತಿಗಳು ಪ್ರಸ್ತಾಪವಾಗಿರಬಾರದು. ಪ್ರಾಧಿಕಾರಕ್ಕೆ ಸಲ್ಲಿಸಲ್ಪಡುವ ಅರ್ಜಿಗಳೊಂದಿಗಿನ ಹಸ್ತಪ್ರತಿಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆದ್ದರಿಂದ ತಮ್ಮ ಮೂಲ ಹಸ್ತಪ್ರತಿಯ ಒಂದು ಪ್ರತಿಯನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವುದು.ಅರ್ಜಿಗಳೊಂದಿಗೆ ಹಸ್ತಪ್ರತಿ ಸಲ್ಲಿಸಲು ಕೊನೆಯ **ದಿನಾಂಕ:24.12.2025**ರಂದು ಸಂಜೆ 5.30ಗಂಟೆಯೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – 560 002 – ಅವರಿಗೆ ಅರ್ಜಿ ನಮೂನೆಯೊಂದಿಗೆ ಡಿ.ಟಿ.ಪಿ. ಮಾಡಿದ ಹಸ್ತಪ್ರತಿಯನ್ನು ಕಳುಹಿಸಿಕೊಡಲು ಕೋರಿದೆ. ಅರ್ಜಿ ನಮೂನೆಯನ್ನು ಪಡೆಯಲು / ಹೆಚ್ಚಿನ ಮಾಹಿತಿಗಾಗಿ : ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು –560002– ವೆಬ್ಸೈಟ್ **www.kannadapustakapradhi-kara.com,** ದೂರವಾಣಿಸಂಖ್ಯೆ: **080–22484516 / 22107704** – ಇಲ್ಲಿ ಸಂಪರ್ಕಿಸಬಹುದಾಗಿದೆ.

ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ
9902277588, 9880707587, 9008787586

## ಕೃಷಿ ಉಪ ನಿರ್ದೇಶಕರ ಕಚೇರಿಯನ್ನು ಸ್ಥಳಾಂತರ ಮಾಡಿರುವುದನ್ನು ವಿರೋಧಿಸಿ ಅಧಿವೇಶನದಲ್ಲಿ ಧ್ವನಿ ಎತ್ತಲು ಶಾಸಕರಿಗೆ ಮನವಿ




❑ ನೈಜ್ಯ ದೆಸೆ ನ್ಯೂಸ್

ನೈಜ್ಯದೆಸೆ : ಲಿಂಗಸಗೂರು ಡಿ, 8 :– ತಾಲೂಕಿನ ಕೃಷಿ ಉಪ ನಿರ್ದೇಶಕರ ಕಚೇರಿಯನ್ನು ಸಿಂಧನೂ–ರಿಗೆ ಸ್ಥಳಾಂತರಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶವನ್ನು ತಕ್ಷಣವೇ ರದ್ದುಪಡಿಸಲು ಶಾಸಕರು ಹಾಗೂ ಎಂಎಲ್‌ಸಿ ಯವರು ಬೆಳಗಾವಿ ಅಧಿವೇಶನದಲ್ಲಿ ಧ್ವನಿ ಎತ್ತಬೇಕೆಂದು ಲಿಂಗಸಗೂರು ಅಭಿವೃದ್ಧಿ ಹೋರಾಟ ಸಮಿತಿಯಿಂದ ಶಾಸಕ ಮಾನಪ್ಪ ಡಿ ವಜ್ಜಲ್ ಅವ–ರಿಗೆ ಮನವಿ ಸಲ್ಲಿಸಿದರು ತಾಲೂಕಿನ ಕೃಷಿ ಉಪ ನಿರ್ದೇಶಕರ ಕಚೇರಿಯನ್ನು ಸಿಂಧನೂರಿಗೆ ಸ್ಥಳಾಂತರಕ್ಕೆ, ಸರ್ಕಾರದ ಅಧೀನ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶವನ್ನು ತಕ್ಷಣವೇ ರದ್ದುಪಡಿಸಬೇಕು. ಈ ಬಗ್ಗೆ ನಾಳೆಯಿಂದ ನಡೆಯುವ ಬೆಳಗಾವಿ ಅಧಿವೇಶನದಲ್ಲಿ ಶಾಸಕರು ಮಾತನಾಡಬೇಕು. ಕೃಷಿ ಉಪನಿರ್ದೇಶಕರ ಕಛೇರಿ ಲಿಂಗಸಗೂ–ರಿನಲ್ಲಿಯೇ ಉಳಿಯಬೇಕು. ಇದರಲ್ಲಿ ಶಾಸಕರು ವಿಫಲವಾದರೆ ತಕ್ಕ ಪಾಠ ನಾವು ಕಲಿಸುತ್ತೇವೆ ಎಂದು ಲಿಂಗಸಗೂರು ತಾಲೂಕು ಅಭಿವೃದ್ಧಿ ಹೋರಾಟ ಸಮಿತಿ ಎಚ್ಚರಿಸಿದೆ ತಾಲೂಕಿಗೆ ಮಂಜೂರಾತಿ ಹಂತದಲ್ಲಿದ್ದ ಪ್ರಾದೇಶಿಕ ಸಾರಿಗೆ ಕಚೇರಿ ಕೆಪಿಟಿಸಿಎಲ್ ಕಚೇರಿ ಹಾಗೂ ಜಿಲ್ಲಾ ನ್ಯಾಯಾಲಯ ಸೇರಿ ತಾಲೂಕಿನ ಒಂದೊಂದಾಗಿ ಕಚೇರಿಗಳು ಸ್ಥಳಾಂತರವಾಗುತ್ತಿವೆ. ತಾಲೂಕಿನ ಅಭಿವೃದ್ಧಿ ಶೂನ್ಯ. ತಮ್ಮಿಂದಾಗಿ ಕ್ಷೇತ್ರ ಕುಂಠಿತಗೊಂಡಿದೆ. ಲಿಂಗಸಗೂರು ತಾಲೂಕು ಅಭಿವೃದ್ಧಿ ಮಾಡುತ್ತೇವೆಂದು ಕಳೆದ 15 ವರ್ಷಗಳಿಂದ ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಸ್ಥಳೀಯರಾದ ಹಾಲಿ ವಿಧಾನ ಪರಿಷತ್ತು ಸದಸ್ಯರು ಮಾತ್ರ ತಮ್ಮ ಸ್ವ ಅಭಿವೃದ್ಧಿ ಮಾಡಿಕೊಳ್ಳುತ್ತಿದ್ದೀರಿ ವಿನಹ ಕ್ಷೇತ್ರದ ಅಭಿವೃದ್ಧಿಯ ಕಡೆ ಎಳ್ಳಷ್ಟು ಗಮನ ಕೊಟ್ಟಿಲ್ಲ.ಸ್ಥಳೀಯರಾದ ಮಾಜಿ ಸಚಿವರು ಹಾಗೂ ಸಂಸದರು ಈ ಕ್ಷೇತ್ರದಿಂದಲೇ ಸಚಿವರು ಸಂಸದರಾಗಿದ್ದು, ಇವರ ಇಚ್ಛಾಶಕ್ತಿ ಕೊರತೆಯಿಂದ ಲಿಂಗಸಗೂರಿನ ಒಂದೊಂದೇ ಕಚೇರಿಗಳು ಸ್ಥಳಾಂತರವಾಗುತ್ತಿವೆ. ಈ ವಿಷಯಕ್ಕೆ ಸಂಬಂಧವಿಲ್ಲದಂತೆ, ಸ್ಥಳೀಯರಲ್ಲದಂತೆ ಮೌನವಾಗಿ ಇರುವುದು ಖಂಡನೀಯ ನೆಪ ಮಾತ್ರಕ್ಕೆ ಸಚಿವರಿಗೆ ಬರೆದ ಮನವಿ ಪತ್ರವನ್ನು ಸಚಿವರ ಕಚೇರಿಯ ಹಿಂಬದಿಯ ಬಾಗಿಲಿನಲ್ಲಿ ನೀಡಿ , ಪತ್ರಿಕೆಗಳಿಗೆ ಸುದ್ದಿ ನೀಡಿ ನುಣುಚಿಕೊಳ್ಳುವ ನಿಮ್ಮ ನಡೆ ನಮಗೆ ಅರ್ಥವಾಗುತ್ತದೆ. ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ಧ್ವನಿ ಎತ್ತಿ ಕೃಷಿ ಉಪ ನಿರ್ದೇಶಕರ ಕಚೇರಿ–2 ಸ್ಥಳಾಂತರ ಆದೇಶವನ್ನು ರದ್ದುಪಡಿಸದಿದ್ದರೆ ಶಾಸಕರ,ಮತ್ತು ಎಂಎಲ್‌ಸಿ ಗಳು ಇಬ್ಬರ ಮನೆಗೂ ಮುತ್ತಿಗೆ ಹಾಕಿ ತೀವ್ರ ಹೋರಾಟ ನಡೆಸಲಾಗುವುದು. ಅಲ್ಲದೇ ಮುಂದೆ ನೀವು ಯಾವ ಊರುಗಳು ಓಡಾಡದಂತೆ ಘೆರಾವ್ ಹಾಕಿ ಊರುಗಳಿಗೆ ಬರದಂತೆ ನೋಡಿಕೊಳ್ಳಲಾಗುವುದು ಎಂದು ಹೋರಾಟ ಸಮಿತಿ ಎಚ್ಚರಿಸುತ್ತದೆ. ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷ ಶಿವಪುತ್ರ ಗೌಡ ನಂದಿಹಾಳ್ , ರಮೇಶ್ ವೀರಾಪೂರ್ ಸಿ ಪಿ ಐ ಎಂ ತಾಲೂಕ ಕಾರ್ಯದರ್ಶಿ , ವಿಜಯ್ ಕುಮಾರ್ ಪೋಳ್ ಕೆ ಆರ್ ಎಸ್ ಪಕ್ಷ , ಹನುಮಂತ್ ಬಡಿಗೇರ್ ವಿಜಯ ಸೇನೆ ತಾಲೂಕ ಅಧ್ಯಕ್ಷ , ಮಾದೇಶ್ ಕರವೇ , ಬಸವರಾಜ್ ಗೋಸ್ಲೆ ಡಿ ಎಸ್ ಎಸ್ , ಅಮರೇಶ್ ಪವಾರ್, ಹನುಮಂತ ನಾಯಕ ಕರವೇ, ತಿಮ್ಮರೆಡ್ಡಿ ಮುನ್ನೂರು ಜಯ ಕರವೇ ತಾಲೂಕ ಅಧ್ಯಕ್ಷರು ಸೇರಿದಂತೆ ಇನ್ನು ಹಲವರು ಇದ್ದರು.

## ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನಾ ಸಮಾರಂಭ ಕ್ರೀಡಾ ಮನೋಭಾವದಿಂದ ಆಟವಾಡಲು ಮುಖಂಡ ಮನಗೂಳಿ ಸಲಹೆ



❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಕ್ರೀಡೆಯಲ್ಲಿ ಸೋಲು ಗೆಲುವು ಸಹಜ ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ ನಿರಂತರವಾಗಿ ಆಡುವುದು ಒಳ್ಳೆಯ ಕ್ರೀಡಾಪಟುವಿನ ಲಕ್ಷಣವಾಗಿದೆ. ಕ್ರೀಡಾ ಮನೋಭಾವ ಬೆಳೆಸಿಕೊಂಡು ಆಟವಾಡಲು ಪ್ರಯತ್ನಿಸಿ ಎಂದು ಪುರಸಭೆ ಮಾಜಿ ಅಧ್ಯಕ್ಷ ದಶರಥ–ಸಿಂಗ್ ಮನಗೂಳಿ ಕ್ರೀಡಾಪಟುಗಳಿಗೆ ಸಲಹೆ ನೀಡಿದರು. ಶನಿವಾರ ಪಟ್ಟಣದ ಬಿಸ್ತಿಗಲ್ಲಿ ಬಡಾವಣೆಯಲ್ಲಿ ಜಮಾತ್ ವತಿಯಿಂದ ಹಮ್ಮಿಕೊಂಡ ಪ್ರೀಮಿಯರ್ ಲೀಗ್ ಟೆನ್ನಿಸ್ ಬಾಲ್ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ನಿಮ್ಮೆಲ್ಲರ ಪ್ರೀತಿ ವಿಶ್ವಾಸದಿಂದಾಗಿ ನಾನು ಈ ಬಡಾವಣೆಯಿಂದಲೇ ಮೊದಲು ಬಾರಿ ಪುರಸಭೆ ಸದಸ್ಯನಾಗಿ ಆಯ್ಕೆಯಾಗುವುದರೊಂದಿಗೆ ಮೂರು ಬಾರಿ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದೇನೆ. ನಾನು ಈಗಲೂ ನಿಮ್ಮ ಸೇವೆಗೆ ಸಿದ್ದನಾಗಿರುವೆ. ಪಂದ್ಯಾವಳಿಯಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತ ರೀತಿಯಿಂದ ಆಟ ಆಡಿ ಬಡಾವಣೆಯ ಕೀರ್ತಿ ಹೆಚ್ಚಿಸುವಂತೆ ಮಾಡಿ ಎಂದರು. ಉದ್ಘಾಟನಾ ಸಮಾರಂಭದಲ್ಲಿ ಬಿಸ್ತಿಗಲ್ಲಿ ಜಮಾತ್ ಅಧ್ಯಕ್ಷ ರಾಜ ಅಹ್ಮದ್ ಕಲಬುರ್ಗಿ, ಕಾರ್ಯದರ್ಶಿ ಬಾಬು ಮುದ್ನಾಳ, ದಸ್ತಗೀರ ಕಲಬುರ್ಗಿ,ಪಿಂಟು ಹಜೇರಿ, ಇಬ್ರಾಹೀಮಸಾಬ ಕೆಂಭಾವಿ,ರಫೀಕ ಮುರಾಳ, ದಿಲೀಪಸಿಂಗ್ ಹಜೇರಿ, ಅಮಿತಸಿಂಗ್ ಮನಗೂಳಿ, ಪಂದ್ಯಾವಳಿ ಸಂಘಟಕರಾದ ಮಹೆಬೂಬ ಅ.ಕೆಂಭಾವಿ, ಅಬ್ದುಲರಜಾಕ್( ಬುಡ್ಡಾ) ಕೊಡೆಕಲ್, ಬಸೀರ ಯಕ್ಕೇಲಿ,ಲಾಳೆ ಮಶಾಕ್ ಮುರಾಳ,ಮಶಾಕ್ ಹವೇಲಿ,ಶಕೀಲ ಕುಂಬಾರವಾಡಿ,ಮಶಾಕ್ ಕುಂಟೋಜಿ ಹಾಗೂ ಕ್ರೀಡಾಪಟುಗಳು ಇದ್ದರು. 3 ದಿನಗಳ ಈ ಪಂದ್ಯಾವಳಿಯಲ್ಲಿ ನೋಯಾನ್ ಟೈಟನ್ಸ್, ಸೇವನ್ ಸ್ಟಾರ್, ಅಲ್ಟರ್ ಇಗೋ, ಬಾಂಡ್ ರೇಂಜರ್ಸ್, ಪಾವರ್ ರೇಂಜರ್ಸ್ ಹಾಗೂ ಟ್ರೋಫಿ ಫೈಟರ್ಸ್ ಹೀಗೆ ಒಟ್ಟು ಆರು ತಂಡಗಳು ಭಾಗವಹಿಸಿವೆ. ಮುಖಂಡ ದಶರತಸಿಂಗ್ ಮನಗೂಳಿ ಇವರಿಂದ ಪ್ರಥಮ ನಗದು ಬಹುಮಾನ ರೂ.10,000, ದಸ್ತಗೀರ ಕಲ್ಬುರ್ಗಿ ಇವರಿಂದ ದ್ವಿತೀಯ ಬಹುಮಾನ ರೂ.5000, ರಾಜ ಅಹಮದ್ ಕಲಬುರ್ಗಿ ಇವರಿಂದ ತೃತೀಯ ಬಹುಮಾನ ರೂ.2500, ದಿಲೀಪಸಿಂಗ್ ಹಜೇರಿ ಇವರಿಂದ ಚತುರ್ಥ ಬಹುಮಾನ ರೂ.1500 ಹಾಗೂ ವಿಶೇಷ ಬಹುಮಾನಗಳನ್ನು ಘೋಷಿಸಲಾಗಿದೆ.

## ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಎಕ್ಸ್‌ಲೆಂಟ್ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರಿನ ಇಂದಿರಾನಗರದ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಎಕ್ಸ್‌ಲೆಂಟ್ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದ ಡಾಕ್ಟರ್ ಚನ್ನನಗೌಡ ಪಾಟೀಲ್. ವಿಶೇಷ ಶಿಬಿರವು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಾಮಾಜಿಕ ಹೊಣೆಗಾರಿಕೆ ಹಾಗೂ ಸಕಾರಾತ್ಮಕ ಬದಲಾವಣೆಯನ್ನು ತರಲಿದೆ. ವಿಧ್ಯಾರ್ಥಿಗಳಲ್ಲಿ ಪ್ರೇರಣಾ ಮನೋಭಾವನೆ ಬೆಳೆಸುವದು ಎಂದು ಶಿಭಿರಾರ್ಥಿಗಳಿಗೆ ಕಿವಿ ಮಾತು ಹೇಳಿದರು.** ಅಭಿಯಂತರ ರಾಜಶೇಖರ ರೆಡ್ಡಿ ಮಾತನಾಡಿ, ಎಕ್ಸ್‌ಲೆಂಟ್ ಶಿಕ್ಷಣ ಸಂಸ್ಥೆ ಸಾಂಸ್ಕೃತಿಕವಾಗಿ ಹಾಗೂ ಶೈಕ್ಷಣಿಕವಾಗಿ ಶ್ರೇಷ್ಠ ಸಾಧನೆ ತೋ–




ರಿದೆ. ಈ ಸಂಸ್ಥೆಯ ಮಕ್ಕಳು ನಮ್ಮ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಎನ್‌ಎಸ್‌ಎಸ್ ನಡೆಸುತ್ತಿರುವುದು ನಮಗೆ ಹರ್ಷ ತಂದಿದೆ ಎಂದರು. ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮೀಜಿ ಸದಾನಂದ ಮಹಾರಾಜ್ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಎಕ್ಸಲೆಂಟ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ವೆಂಕಟರಾವ್ ವೆಂಕಟರಾವ್ ರಾಷ್ಟ್ರೀಯ ಸೇವಾ ಯೋಜನೆಯ ಧ್ವಜಾರೋಹಣ ನೆರವೇರಿಸಿದರು. ಸರಕಾರಿ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಮಹಾದೇವ್ ಗೋನ್ವಾರ್, ದೇವರಗುಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಕಳಕಪ್ಪ ಗಡಾದ್, ಎಕ್ಸಲೆಂಟ್ ಪದವಿ ಕಾಲೇಜಿನ ವಿದ್ಯಾರ್ಥಿಗಳು ರಾಮಕೃಷ್ಣ ಆಶ್ರಮದ ಭಕ್ತರು ಉಪಸ್ಥಿತರಿದ್ದರುಮಲ್ಲು ನಾಯಕ, ಬಸವರಾಜ ಡಾಕ್ಟರ್, ದುರುಗಣ್ಣ ಮರಾಟ ಸೇರಿದಂತೆ ಅನೇಕರು ಇದ್ದರು.

## ಬಸವ ಶ್ರೀ ಸೌಹಾರ್ದ ಸಹಕಾರಿ ನಿಯಮಿತ ಅಧ್ಯಕ್ಷ– ಉಪಾಧ್ಯಕ್ಷರ ಆಯ್ಕೆ ಡಾ.ನಾಲಬಂದ ಅಧ್ಯಕ್ಷರಾಗಿ, ಗದಿಗೆಪ್ಪಗೋಳ ಉಪಾಧ್ಯಕ್ಷರಾಗಿ ಆಯ್ಕೆ ತಾಳಿಕೋಟಿ

❑ ನೈಜ್ಯ ದೆಸೆ ನ್ಯೂಸ್

ಪಟ್ಟಣದ ಬಸವ ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇದರ ಆಡಳಿತ ಮಂಡಳಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಡಾ. ಅಬ್ದುಲಖಾದರ್ ಎ.ನಾಲಬಂದ ಅಧ್ಯಕ್ಷರಾಗಿ ಹಾಗೂ ಚೆನ್ನಪ್ಪ ಗದಿಗೆಪ್ಪಗೋಳ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಭಾನುವಾರ ಸಂಘದ ಸಭಾಂಗಣದಲ್ಲಿ ನಡೆದ ಆಡಳಿತ ಮಂಡಳಿ ನಿರ್ದೇಶಕರ ಸಭೆಯಲ್ಲಿ




ಈ ಆಯ್ಕೆ ನಡೆಯಿತು. ಸಭೆಯ ಮುಂದೆ ಬಂದಂತಹ ಅಧ್ಯಕ್ಷ ಉಪಾಧ್ಯಕ್ಷರ ಹೆಸರುಗಳನ್ನು ನಿರ್ದೇಶಕ ಪ್ರಭುಗೌಡ ಮದರಕಲ್ಲ ಸೂಚಿಸಿದರು. ಇದಕ್ಕೆ ನಿರ್ದೇಶಕ ಶ್ರೀಕಾಂತ ಪತ್ತಾರ ಅನುಮೋದಿಸಿದರು. ಸರ್ವ ನಿರ್ದೇಶಕರು ಈ ವಿಷಯಕ್ಕೆ ಸರ್ವಾನುಮತದ ಬೆಂಬಲ ವ್ಯಕ್ತಪಡಿಸಿದರು. ಸಭೆಯಲ್ಲಿ ಆಡಳಿತ ಮಂಡಳಿ ನಿರ್ದೇಶಕರಾದ ಪವಾಡೆಪ್ಪ ಬಿ.ಯಾಳವಾರ, ಮಲ್ಲಿಕಾರ್ಜುನ ಎಸ್. ನಾಗರಾಳ, ರವಿ ಜಿ.ಬಿರಾದಾರ,ಸುರೇಶ ಸಿ.ಪಾಟೀಲ, ಜಿ.ಎಸ್. ಜಂಬಲದಿನ್ನಿ, ಹಾಗೂ ಸಿಬ್ಬಂದಿಗಳಾದ ನಂದಿನಿ ಬಿ.ಹೊಸಮನಿ, ಅಂಬರೀಶ್ ಎಸ್. ಬಿರಾದಾರ, ಮಲ್ಲಿಕಾರ್ಜುನ ಕುಂಬಾರ ಇದ್ದರು.

## ಡಿ.8ರಿಂದ ಬೆಳಗಾವಿ ಅಧಿವೇಶನ; 10 ದಿನಗಳಲ್ಲಿ ಚರ್ಚೆಗೆ ಬರಲಿವೆ 30 ಮಸೂದೆಗಳು!

❑ ನೈಜ್ಯ ದೆಸೆ ನ್ಯೂಸ್

ಈ ವರ್ಷದ ಕರ್ನಾಟಕ ಚಳಿಗಾಲದ ಅಧಿವೇಶನವು ಡಿಸೆಂಬರ್ 8ರಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ಅರಂಭವಾಗಲಿದೆ. ಗುರುವಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಅಧಿವೇಶನವನ್ನು 10 ದಿನಗಳ ಕಾಲ ನಡೆಸಲು ನಿರ್ಧರಿಸಲಾಗಿದೆ. ಅಧಿವೇಶನದಲ್ಲಿ ಸುಮಾರು 30 ಮಸೂದೆಗಳು ಚರ್ಚೆಗೆ ಬರಲಿವೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಕಳೆದ ಮುಂಗಾರು ಅಧಿವೇಶನದಲ್ಲಿ ಬರೋಬ್ಬರಿ 39 ಮಸೂದೆಗಳನ್ನು ಸರ್ಕಾರ ಮಂಡಿಸಿ, ಅಂಗೀಕರಿಸಿತ್ತು. ಅತೀ ಹೆಚ್ಚು ಮಸೂದೆಗಳು ಮಂಡನೆಯಾಗಿ, ಅನುಮೋದನೆಗೊಂಡ ಅಧಿವೇಶನವೆಂದು ಕರೆಸಿಕೊಂಡಿತ್ತು. ಈ ಬಾರಿಯ ಅಧಿವೇಶನದಲ್ಲಿ 30 ಮಸೂದೆಗಳನ್ನು ಚರ್ಚೆಗೆ ತರಲು ಸರ್ಕಾರ ಸಿದ್ದತೆ ನಡೆಸಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಮಾಹಿತಿ



ಪ್ರಕಾರ, ಅಧಿವೇಶನದಲ್ಲಿ ಸುಮಾರು 33 ವಿವಿಧ ಮಸೂದೆಗಳನ್ನು ಮಂಡಿಸುವ ಸಾಧ್ಯತೆ ಇದೆ. ಸುಮಾರು 16 ಮಸೂದೆಗಳು ಮಂಡಿಸಲು ಸಚಿವ ಸಂಪುಟವು ಅನುಮೋದಿಸಿದೆ. 12 ಮಸೂದೆಗಳ ಕರಡು ಸಿದ್ಧವಾಗಿದ್ದು, ಮುಂದಿನ ಸಂಪುಟ ಸಭೆಯಲ್ಲಿ ಸಮ್ಮತಿ ಪಡೆಯುವ ಸಾಧ್ಯತೆಗಳಿವೆ. ಉಳಿದಂತೆ, ಕಳೆದ ಅಧಿವೇಶನದಲ್ಲಿ 2 ಮಸೂದೆಗಳು ಜಂಟಿ ಸದನ ಸಮಿತಿ ಪರಿಶೀಲನೆಗೆ ಕಳುಹಿಸಲಾಗಿದ್ದು, ಆ ಮಸೂದೆಗಳೂ ಈಬಾ–ರಿಯ ಕಲಾಪದಲ್ಲಿ ಮತ್ತೆ ಮಂಡನೆಯಾಗುವ ನಿರೀಕ್ಷೆ ಇದೆ.ಸರ್ಕಾರ ಸಿದ್ದಪಡಿಸಿ, ಪಟ್ಟಿ ಮಾಡಿರುವ ಮಸೂದೆಗಳು ಗ್ರೇಟ–ರ್ ಬೆಂಗಳೂರು (2ನೇ ತಿದ್ದುಪಡಿ) ಮಸೂದೆ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಮಸೂದೆ–2025

ಕರ್ನಾಟಕ ಗೃಹ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ ಕರ್ನಾಟಕ ದಿನಗೂಲಿ ಕಾರ್ಮಿಕ ಕಲ್ಯಾಣ (ತಿದ್ದುಪಡಿ) ಮಸೂದೆ ಕರ್ನಾಟಕ ಬಾಡಿಗೆ (ತಿದ್ದುಪಡಿ) ಮಸೂದೆ–2025=ಔಷಧಗಳು ಮತ್ತು ಸೌಂದರ್ಯವರ್ಧಕಗಳು(ಕರ್ನಾಟಕ ತಿದ್ದುಪಡಿ) ಮಸೂದೆ ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕ್ಷೇಮಾಭಿವೃದ್ಧಿ (ತಿದ್ದುಪಡಿ) ವಿಧೇಯಕ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ಮಸೂದೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಮಸೂದೆ ಕರ್ನಾಟಕ ಭೂ ಸುಧಾರಣೆ (ಎರಡನೇ ತಿದ್ದುಪಡಿ) ಮಸೂದೆಕರ್ನಾಟಕ ಸಂಸ್ಥೆಗಳಲ್ಲಿ ಖಾಸಗಿ ಹೊರಗುತ್ತಿಗೆ ನಿಷೇಧ ಮಸೂದೆ ಕರ್ನಾಟಕ ಪರಿಶಿಷ್ಟ ಜಾತಿ (ಮೀಸಲಾತಿ ವರ್ಗೀಕರಣ) ಮಸೂದೆ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ ದ್ವೇಷ ಅಪರಾಧಗಳು ಮತ್ತು ದ್ವೇಷ (ಹೋರಾಟ, ತಡೆಯುವಿಕೆ) ವಿಧೇಯಕ ಕರ್ನಾಟಕ ಕುಟುಂಬ (ಪ್ರವೇಶ ಮತ್ತು ನಿರ್ವಹಣೆ) ಮಸೂದೆ ಕರ್ನಾಟಕ ಕಟ್ಟಡ ಉಲ್ಲಂಘನೆ ನಿಯಂತ್ರಣ ಮಸೂದೆ ಕರ್ನಾಟಕ ಸಾಮಾಜಿಕ ಬಹಿಷ್ಕಾರದಿಂದ ಜನರ ರಕ್ಷಣೆ (ತಡೆ, ನಿಷೇಧ ಮತ್ತು ಪರಿಹಾರ) ಮಸೂದೆ ಕರ್ನಾಟಕ ತಪ್ಪು ಮಾಹಿತಿ ನಿಯಂತ್ರಣ ಮಸೂದೆ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಮಸೂದೆ ಕರ್ನಾಟಕ ಅಪಾರ್ಟ್ಮೆಂಟ್ ಮಾಲಿಕತ್ವ (ನಿಯಂತ್ರಣ) ಮಸೂದೆ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ (ತಿದ್ದುಪಡಿ) ವಿಧೇಯಕ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತೆ ಪ್ರಾಧಿಕಾರ (ತಿದ್ದುಪಡಿ) ಮಸೂದೆ ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮಗಳು ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿರ್ವಹಣೆ) ವಿಧೇಯಕ ನಾಡಪ್ರಭು ಕೆಂಪೇಗೌಡ ಪಾರಂಪ–ರಿಕ ಪ್ರದೇಶಾಭಿವೃದ್ಧಿ (ತಿದ್ದುಪಡಿ) ಮಸೂದೆ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಇತರ ನಿಗದಿತ ನಿಯಮಗಳ (ತಿದ್ದುಪಡಿ) ಮಸೂದೆ ಶ್ರೀ ಘಾಟಿ ಸುಬ್ರಮಣ್ಯ ಕ್ಷೇತ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ ಬಯಲು ಸೀಮೆ ಮಂಡಳಿ ಮಸೂದೆ ಮಲೆನಾಡು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಸೂದೆ ಕರ್ನಾಟಕ ಜಿಲ್ಲಾ ನ್ಯಾಯಾಂಗ ಸುಧಾರಣೆ ಮಸೂದೆ ಚಂದ್ರಗುತ್ತಿ ಶ್ರೀ ರೇಣುಕಾಂಬ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಸೂದೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದಪಡಿ) ಮಸೂದೆ ಮಲೈ ಮಾದೇಶ್ವರ ಪ್ರಾಧಿಕಾರ ಮಸೂದೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಅಗದ್ ತಂತ್ರ

M.D. ಅಗದ್ ತಂತ್ರ (Agad Tantra) M.D. ಅಗದ್ ತಂತ್ರ (Agad Tantra) ಎಂಬುದು ಆಯುರ್ವೇದದಲ್ಲಿ ವಿಷಶಾಸ್ತ್ರ ಮತ್ತು ವೈದ್ಯಕೀಯ ನ್ಯಾಯಶಾಸ್ತ್ರದ ಬಗ್ಗೆ ಅಧ್ಯಯನ ಮಾಡುವ 3 ವರ್ಷಗಳ ಸ್ನಾತಕೋತ್ತರ ಕೋರ್ಸ್ (PG), ಇದು ವಿಷಗಳ ಗುರುತಿಸುವಿಕೆ, ನಿರ್ವಹಣೆ, ಚಿಕಿತ್ಸೆ, ಆಯುರ್ವೇದ ಹಾಗೂ ಆಧುನಿಕ ವಿಷಶಾಸ್ತ್ರ ಮತ್ತು ಕಾನೂನು ಅಂಶಗಳನ್ನು ಒಳಗೊಂಡಿರುತ್ತದೆ; ಃಂಒಖ ನಂತರ ಇದನ್ನು ಮಾಡಬಹುದು. ವಿಷಶಾಸ್ತ್ರ ವಿಷಗಳು, ಅವುಗಳ ವಿಧಗಳು, ಪರಿಣಾಮಗಳು, ಮತ್ತು ಆಯುರ್ವೇದ ಹಾಗೂ ಆಧುನಿಕ ವಿಧಾನಗಳ ಮೂಲಕ ಚಿಕಿತ್ಸೆ. ವಿಧಿ ವೈದ್ಯಕ (ವೈದ್ಯಕೀಯ ಕಾನೂನುಗಳು, ನೀತಿಗಳು ಮತ್ತು ನ್ಯಾಯಾಂಗ ಪ್ರಕ್ರಿಯೆಗಳು. ನಿರ್ವಿಶೀಕರಣ ವಿಷಗಳನ್ನು ದೇಹದಿಂದ ಹೊರಹಾಕುವ ವಿಧಾನಗಳು.ವೈದ್ಯಕೀಯ ನೀತಿಶಾಸ್ತ್ರ ಆಯುರ್ವೇದ ಪದ್ಧತಿಗಳಿಗೆ ಸಂಬಂಧಿಸಿದ ಕಾನೂನು ಮತ್ತು ನೈತಿಕ ಅಂಶಗಳು. ಅರ್ಹತೆ (Eligibility): BAMS (Bachelor of Ayurvedic Medicine and Surgery) ಪದವಿ.ನಿಮ್ಮ ಎಂಡಿ ಅಗದ್ ತಂತ್ರ ಅವುಂ ವಿಧಿ ವಿಜ್ಞಾನ ಪದವಿಯನ್ನು ಪೂರ್ಣಗೊಳಿಸಿದ ನಂತರ, ನೀವು ಹಲವಾರು ಆಯುರ್ವೇದ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳ ವಿಷಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗಗಳಲ್ಲಿ ವಿಷಶಾಸ್ತ್ರ ಮತ್ತು ವಿಧಿವಿಜ್ಞಾನ ತಜ್ಞರಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.ಆಗದ್ ತಂತ್ರದಲ್ಲಿ ಡಾಕ್ಟರೇಟ್ ಪಡೆದರೆ, ವ್ಯಕ್ತಿಗಳು ಆರೋಗ್ಯ ರಕ್ಷಣಾ ಉದ್ಯಮದಲ್ಲಿ ಅಥವಾ ಗಿಡಮೂಲಿಕೆ ಔಷಧಿಗಳನ್ನು ತಯಾರಿಸುವ ಔಷಧ ಕಂಪನಿಗಳಲ್ಲಿ ಆರೋಗ್ಯ ಮೇಲ್ವಿಚಾರಕರಾಗಿ ಉದ್ಯೋಗ ಪಡೆಯಲು ಸಾಧ್ಯವಾಗುತ್ತದೆ. ಆಯುರ್ವೇದದ ಉದ್ಯೋಗಗಳು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಲಭ್ಯವಿದೆ. ಎಂ.ಡಿ. ಅಗದ್ ತಂತ್ರವನ್ನು ಅನುಸರಿಸಿ, ಲೆಕ್ಕವಿಲ್ಲದಷ್ಟು ವೃತ್ತಿ ಆಯ್ಕೆಗಳಿವೆ. ವ್ಯಕ್ತಿಗಳು ವಿಧಿವಿಜ್ಞಾನ ಔಷಧ ತಜ್ಞರು, ಸಹಾಯಕ ಪ್ರಾಧ್ಯಾಪಕರು, ವೈದ್ಯಕೀಯ ಅಧಿಕಾರಿ/ಮುಖ್ಯಸ್ಥರು, ಔಷಧಿಕಾರರು, ರಸಾಯನಶಾಸ್ತ್ರಜ್ಞರು ಮತ್ತು ಜೀವರಾಸಾಯನಿಕ ತಜ್ಞರು, ಸಂಶೋಧನಾ ಸಹವರ್ತಿ ಮತ್ತು ಆಯುರ್ವೇದದಲ್ಲಿ ಇತರ ಹುದ್ದೆಗಳಾಗಿ ಕೆಲಸ ಮಾಡಬಹುದು. ಪ್ರಕ್ರಿಯೆ ಕ್ಷೇತ್ರಗಳಲ್ಲಿನ ಪ್ರಗತಿಯ ಪರಿಣಾಮವಾಗಿ, ಎಂ.ಡಿ. ಅಗದ್ ತಂತ್ರ ಕೋರ್ಸ್ಗಳ ವ್ಯಾಪ್ತಿ ವಿಸ್ತರಿಸುತ್ತಿದೆ. ಎಂಡಿ ಆಯುರ್ವೇದವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ವ್ಯಕ್ತಿಗಳು ತಮ್ಮ ಮುಂದಿನ ಅಧ್ಯಯನವನ್ನು ಮುಂದುವರಿಸಲು ಆಯ್ಕೆಗಳಿವೆ. ಅವರು ಆಯುರ್ವೇದದಲ್ಲಿ ಪಿಎಚ್ಡಿ ಪದವಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಆಗದ್ ತಂತ್ರದಲ್ಲಿ ಡಾಕ್ಟರೇಟ್ ಪಡೆದರೆ ವೈದ್ಯಕೀಯ ಕ್ಷೇತ್ರದಲ್ಲಿ ಅಥವಾ ಗಿಡಮೂಲಿಕೆ ಔಷಧಿ ತಯಾರಿಸುವ ಔಷಧೀಯ ವ್ಯವಹಾರಗಳಲ್ಲಿ ಆರೋಗ್ಯ ಮೇಲ್ವಿಚಾರಕರಾಗಿ ಕೆಲಸ ಮಾಡಲು ಅವಕಾಶ ಸಿಗುತ್ತದೆ.

# ಉತ್ತರ ಗೋವಾದ ಅರ್ ಪೋರಾದಲ್ಲಿ ಭೀಕರ ಅಗ್ನಿ ದುರಂತ

❑ ನೈಜ್ಯ ದೆಸೆ ನ್ಯೂಸ್

ಗೋವಾ , ಡಿ. 7: ಉತ್ತರ ಗೋವಾದ ಅರ್ ಪೋರಾದಲ್ಲಿ ಭೀಕರ ಅಗ್ನಿ ದುರಂತವೊಂದು ಸಂಭವಿಸಿದೆ. ನೈಟ್ ಕ್ಲಬ್‌ನಲ್ಲಿ (ಉಂಚಿ ಓರ್ಚಿಣ ಛಿಟಣಾಛ ಈಡಿಜ) ಬೆಂಕಿ ಕಾಣಿಸಿಕೊಂಡು 25 ಮಂದಿ ದುರ್ಮರಣ ಹೊಂದಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಈ ಘಟನೆ ದೇಶವನ್ನೇ ಬೆಚ್ಚಿ ಬೀಳಿಸಿದ್ದು, ರಾಜ್ಯ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ರಾತ್ರಿ 100ಕ್ಕೂ ಹೆಚ್ಚು ಜನರಿದ್ದ ಡ್ಯಾನ್ಸ್ ಫ್ಲೋರ್‌ನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ಉತ್ತರ ಗೋವಾದ ಅರ್ಪೋರಾದ ರೋಮಿಯೋ



ಲೇನ್‌ನಲ್ಲಿರುವ ಜನಪ್ರಿ ನೈಟ್ ಕ್ಲಬ್ ಇದಾಗಿದ್ದು, ತಡ ರಾತ್ರಿ 1 ಗಂಟೆಗೆ ಅಗ್ನಿ ಅವಘಡ ಸಂಭವಿಸಿದೆ. ಅಡುಗೆ ಮನೆಯ ಬಳಿ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಅವಘಡ ಸಂಭವಿಸಿದ್ದು, ಕೆಲವೇ ಸಮಯದಲ್ಲಿ ಇಡೀ ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ಪ್ರವಾಸಿಗರು ಡ್ಯಾನ್ಸ್ ಮಾಡುತ್ತಿದ್ದ ಕ್ಲಬ್‌ನ ಮೊದಲ ಮಹಡಿಯಲ್ಲಿಯೇ ಬೆಂಕಿ ಕಾಣಿಸಿಕೊಂಡಿದೆ. ಹೆಚ್ಚಿನ ಸಾವುಗಳು ಸುಟ್ಟ ಗಾಯಗಳಿಂದಲ್ಲ ಬದಲಾಗಿ ಉಸಿರುಗಟ್ಟುವಿಕೆಯಿಂದ ಸಂಭವಿಸಿದೆ ಎಂದು ಪ್ರಾಥಮಿಕ ತನಿಖಾ ವರದಿ ಬಹಿರಂಗಪಡಿಸಿವೆ. ಬೆಂಕಿ ಹತ್ತಿ ಕೊಳ್ಳುತ್ತಿದ್ದಂತೆ ಆತಂಕಗೊಂಡ ಜನರು ಓಡಿ ಹೋಗುವ ಪ್ರಯತ್ನಿಸಿದ್ದಾರೆ. ಈ ವೇಳೆ ಕೆಲವರು ಕೆಳಮಹಡಿಯ ಅಡುಗೆಮನೆ ಪ್ರದೇಶಕ್ಕೆ ಹೋಗಿ ಅಲ್ಲಿ ಸಿಕ್ಕಿಬಿದ್ದಿದ್ದಾರೆ. ಅಲ್ಲಿ ದಟ್ಟವಾದ ಹೊಗೆ ಆವರಿಸಿದ್ದರಿಂದ ಬಹುತೇಕ ಜನರು ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಮೃತರ ಪೈಕಿ 14 ಜನರು ಕ್ಲಬ್‌ನ ಸಿಬ್ಬಂದಿ ಸೇರಿದ್ದು, ನಾಲ್ವರು ಪ್ರವಾಸಿಗರು ಎಂಬುದು ದೃಢಪಟ್ಟಿದೆ. ಉಳಿದ ಏಳು ಜನರ ಗುರುತು ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದೆ. ಅಗ್ನಿ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿರುವುದು ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ.ಈ ಹಿನ್ನೆಲೆಯಲ್ಲಿ ಕ್ಲಬ್ ಪ್ರಧಾನ ವ್ಯವಸ್ಥಾಪಕನನ್ನು ಬಂಧಿಸಲಾಗಿದ್ದು, ಮಾಲೀಕನ ವಿರುದ್ಧವೂ ಪೊಲೀಸರು ವಾರಂಟ್ ಜಾರಿಗೊಳಿಸಿದ್ದಾರೆ. ಪೊಲೀಸ್ ಮಾಹಿತಿ ಪ್ರಕಾರ, ನೈಟ್‌ಕ್ಲಬ್‌ನ ಒಳಾಂಗಣವು ಸುಲಭವಾಗಿ ಬೆಂಕಿ ಹತ್ತುವ ವಸ್ತುಗಳಿಂದ ನಿರ್ಮಿತವಾಗಿತ್ತು ಮತ್ತು ಹೊರಹೋಗಲು ಕೇವಲ ಒಂದೇ ಕಿರಿದಾದ ದ್ವಾರ ಇತ್ತು. ಇದು ಸಾವಿನ ಸಂಖ್ಯೆ ಹೆಚ್ಚಲು ಪ್ರಮುಖ ಕಾರಣವಾಗಿದೆ.

# ಅತಿಥಿ ಉಪನ್ಯಾಸಕರ ಪ್ರತಿಭಟನಾ ಸ್ಥಳಕ್ಕೆ ಕಾನೂನು ಸಚಿವ ಡಾ.ಎಚ್.ಕೆ.ಪಾಟೀಲ ಭೇಟಿ,ಬೇಡಿಕೆ ಈಡೇರಿಸುವ ಭರವಸೆ



❑ ನೈಜ್ಯ ದೆಸೆ ನ್ಯೂಸ್

ಗದಗ : ಡಿ07 – ಗದಗ ನ ಜಿಲ್ಲಾಡಳಿತ ಭವನದ ಮುಂದೆ ಕರ್ನಾಟಕ ರಾಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರುಗಳ ಸಂಘದವತಿಯಿಂದ ಸೇವಾ ಖಾಯಮಾತಿಗಾಗಿ ಕಳೆದ 13 ದಿನಗಳಿಂದ ನಡೆದಿದ್ದ ಅನಿರ್ದಿಷ್ಟಾವಧಿ ಪ್ರತಿಭಟನಾ ಸ್ಥಳಕ್ಕೆ ರವಿವಾರ ಮದ್ಯಾಹ್ನ ಆಗಮಿಸಿದ ಕಾನೂನು ಸಚಿವ ಡಾ.ಎಚ್.ಕೆ.ಪಾಟೀಲ ಪ್ರತಿಭಟನಾಕಾರರ ಬೇಡಿಕೆಯನ್ನು ಆಲಿಸಿನ್ಯಾಯಯುತವಾದ ನಿಮ್ಮ ಹೋರಾಟದ ಬಗ್ಗೆ ಮುಖ್ಯಮಂತ್ರಿ ಮತ್ತು ಉನ್ನತ ಶಿಕ್ಷಣ ಇಲಾಖೆಯ ಮಂತ್ರಿಗಳ ಬಳಿ ಸುದೀರ್ಘವಾದ ಚರ್ಚೆ ನಿರಂತರ ನಡೆದಿದೆ, ಯಾರಿಗೂ ಅನ್ಯಾಯವಾಗದ ಹಾಗೆ ಒಂದು ಸ್ಪಷ್ಟ ತೀರ್ಮಾನಕ್ಕೆ ಬರಲಾಗುವುದು ಎಂದು ತಿಳಿಸಿದರು.ಆದರೆ ಸ್ಥಳದಲ್ಲೇ ಇದ್ದ ಅತಿಥಿ ಉಪನ್ಯಾಸಕರು ನಮ್ಮ ಹೋರಾಟ ಬೇಡಿಕೆಗಳು ಈಡೇರುವವರಿಗೂ ಮುಂದುವರೆಯುತ್ತದೆಂದು ಪಟ್ಟು ಹಿಡಿದರು.ನಂತರ ಸಚಿವರ ಭರವಸೆಯ ಹಿನ್ನೆಲೆಯಲ್ಲಿ ಗದಗ ನಲ್ಲಿ ನಡೆಯುತ್ತಿರುವ ಧರಣಿಯನ್ನು ದಿ.12–12–2025 ರಂದು ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ನಿರ್ಣಾಯಕ ಹೋರಾಟ ಮಾಡಲು ತೀರ್ಮಾನಿಸಿದರು.ನಂತರ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಡಾಕ್ಟರ್,ಹೆಚ್,ಆರ್,ಕಲ್ಮನಿ ಗದಗ ನಲ್ಲಿ ನಿರಂತರವಾಗಿ 13 ದಿನಗಳ ಕಾಲ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಬೆಂಬಲ ನೀಡಿದ ತೋಂಟದಾರ್ಯ ಮಠದ ಪೂಜ್ಯ ಶ್ರೀ ಡಾ.ಸಿದ್ದರಾಮ ಶ್ರೀಗಳಿಗೆ.ವಿ.ಪ ಸದಸ್ಯ ಎಸ್.ವಿ.ಸಂಕನೂರು,ಹಿರಿಯ ಶಿಕ್ಷಣ ತಜ್ಞರಾದ ಡಾ.ಆರ್.ಎಂ.ಕುಬೇರಪ್ಪರವರಿಗೆ,ಬೆಂಬಲ ನೀಡಿದ ವಿವಿಧ ಸಂಘಟನೆಗಳಿಗೆ ಹಾಗೂ ಪತ್ರಿಕಾ ಮಾಧ್ಯಮಮಿತ್ರರಿಗೆ,ಆರಕ್ಷಕ ಸಿಬ್ಬಂದಿಗಳಿಗೆ,ಮತ್ತು ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿ ಭಾಗವಹಿಸಿದ ಸಕಲ ಅತಿಥಿ ಉಪನ್ಯಾಸಕರುಗಳಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ರಾಜ್ಯಾಧ್ಯಕ್ಷ ಡಾ,ಕಲ್ಮನಿ ತಿಳಿಸಿದರು.


# ಹಿರೇ ಲೆಕ್ಕಿಹಾಳದಲ್ಲಿ ಡೆಂಗ್ಯೂ ಜಾಗೃತಿ



❑ ನೈಜ್ಯ ದೆಸೆ ನ್ಯೂಸ್

ಹಿರೇ ಲೆಕ್ಕಿಹಾಳ ದಲ್ಲಿ ಡೆಂಗ್ಯೂ ಜಾಗೃತಿ: ಬಯ್ಯಾಪುರ ಆರೋಗ್ಯ ಕೇಂದ್ರ ವ್ಯಾಪ್ತಿಯ ಹಿರೇ ಲೆಕ್ಕಿಹಾಳ ಜಿಲ್ಲಾ ಸಮೀಕ್ಷಣ ಅಧಿಕಾರಿ ಡಾ: ಕೆ.ಗಣೇಶ್ ಅವರ ನೇತೃತ್ವದಲ್ಲಿ ಗ್ರಾಮದಲ್ಲಿ ಡೆಂಗ್ಯೂ ಜ್ವರ ಕುರಿತು ಜನರಿಗೆ ಮನೆ ಮನೆ ಭೇಟಿ ನೀಡಿ ಮಾಹಿತಿ ಆರೋಗ್ಯ ಶಿಕ್ಷಣ ನೀಡಲಾಯಿತು. ಹಾಗೂ ಲಾರ್ವಾ ಸಮೀಕ್ಷೆ ಹಾಗೂ ಜ್ವರವಿರವವರಿಗೆ ಗ್ರಾಮದ ಅಂಗನವಾಡಿ ಕೇಂದ್ರ ದಲ್ಲಿ ವೈದ್ಯರು ಚಿಕಿತ್ಸೆ ನೀಡಿದರು. ಉಪ್ಪಾರ ನಂದಿಹಾಳ ಗ್ರಾಮ ಪಂಚಾಯತಿ ಸಿಬ್ಬಂದಿ ಒಳಾಂಗಣ ಫಾಗಿಂಗ್ ಕಾರ್ಯ ನಡೆಸಿದರು. ತಾಲೂಕು ಆರೋಗ್ಯ ಅಧಿಕಾರಿ ಡಾ: ಅಮರೇಶ ಪಾಟೀಲ. ಬಯ್ಯಾಪುರ ವೈದ್ಯಾಧಿಕಾರಿ ಡಾ: ರವಿಕಿರಣ. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ್. ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್ ಜೋಶಿ.ಸಾಂಕ್ರಾಮಿಕ ರೋಗ ಮೇಲ್ವಿಚಾರಕ ಅಶೋಕ ಮಡ್ಡಿಕರ್.ಸಿ.ಹೆಚ್.ಓ.ಸಂಗಮೇಶ.ರವಿ.ಹಿರಿಯ ನಿರೀಕ್ಷಣಾಧಿಕಾರಿಗಳಾದ ಶರಣಬಸವ ವಿಶ್ವನಾಥ ಮತ್ತು ಆಶಾಕಾರ್ಯಕರ್ತರ ತಂಡ ಡೆಂಗ್ಯೂ ನಿಯಂತ್ರಣ ಕಾರ್ಯ ಚಟುವಟಿಕೆಯಲ್ಲಿ ಭಾಗವಹಿಸಿದ್ದರು.

# ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (IISc) ಸಮಿತಿಗೆ ರಾಯಚುರು ಜಿಲ್ಲೆಯ ಸಂಸದರು ಜಿ.ಕುಮಾರ ನಾಯಕ ಆಯ್ಕೆ..



❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (IISc) ಸಮಿತಿಗೆ ರಾಯಚುರು ಜಿಲ್ಲೆಯ ಸಂಸದರು ಜಿ.ಕುಮಾರ ನಾಯಕರವರನ್ನು ನಾಮನಿರ್ದೇಶನ ಆಯ್ಕೆಯಾಗಿದ್ದಾರೆ..ಈ ಬಾರಿ ಲೋಕಸಭೆಯಿಂದ ನಾಮನಿರ್ದೇಶಿತವಾದ ಇಬ್ಬರು ಸದಸ್ಯರೂ ಆಯ್ಕೆಯಾಗಿದ್ದಾರೆ. ಹಾಗೆ ಇವರ ಸಹೋದ್ಯೋಗಿ ಹಾಗೂ ಸಹ ಸದಸ್ಯರಾದ ಶ್ರೀ ತೇಜಸ್ವಿ ಸೂರ್ಯ ಅವರು ಆಯ್ಕೆಯಾಗಿದ್ದಾರೆ ಭಾರತದ ಪ್ರಮುಖ ವೈಜ್ಞಾನಿಕ ಸಂಸ್ಥೆಗಳಲ್ಲೊಂದು ಆಗಿರುವ ಖಖಖಛಿ ನಲ್ಲಿ ಸೇವೆ ಸಲ್ಲಿಸುವ ಅವಕಾಶ ಜಿಲ್ಲೆಗೆ ಹಾಗೂ ಮಾನ್ಯ ಸಂಸದರಿಗೆ ಮಹತ್ತರ ಗೌರವ ಮತ್ತು ಸೌಭಾಗ್ಯ. ಸಂಸ್ಥೆಯ ಮುಂದಿನ ಪ್ರಗತಿಗೆ ಇವರ ಕೊಡುಗೆ ನೀಡಲು ಎದುರುನೋಡುತ್ತಿದ್ದೇವೆ .ಇವರ ಸಮೂಹ ಪ್ರಯತ್ನಗಳು ಖಖಖಛಿ ಯ ದೃಷ್ಟಿಯನ್ನು ಮತ್ತಷ್ಟು ಬಲಪಡಿಸಿ, ಭಾರತದ ವೈಜ್ಞಾನಿಕ ಭವಿಷ್ಯವನ್ನು ಬಲಗೊಳಿಸಲಿದೆ ಎಂಬ ನಂಬಿಕೆ ರಾಯಚೂರು ಜನರಿಗೆ ಇದೆ.

ನೈಜ್ಯೆ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಜೀವ ಸ್ಪಂದನ ಚಾರಿಟೇಬಲ್ ಟ್ರಸ್ಟ್ ಗೆ ರಾಜ್ಯ ಮಟ್ಟದ ಕರುನಾಡ ಸೇವಾ ರತ್ನ



ಬೆಂಗಳೂರಿನ ಯಲಹಂಕ ಹತ್ತಿರದ ಬೆಟ್ಟಹಲಸೂರಿನಲ್ಲಿ ಹಸಿರೇ ಉಸಿರು ಟ್ರಸ್ಟ್ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಸಿಂಧನೂರಿನ ನಮ್ಮ ಜೀವ ಸ್ಪಂದನ ಚಾರಿಟೇಬಲ್ ಟ್ರಸ್ಟ್ ಗೆ ಕರುನಾಡ ಸೇವಾ ರತ್ನ ಪ್ರಶಸ್ತಿ ನೀಡಿದೆ.ಈ ಸಮಯದಲ್ಲಿ ಜೀವ ಸ್ಪಂದನ ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿಯಾದ ಅವಿನಾಶ ದೇಶಪಾಂಡೆ ಅವರು ಈ ಪ್ರಶಸ್ತಿಯನ್ನು ಗೌರವವಾಗಿ ಸ್ವೀಕರಿಸಿದರು. ಈ ಸಮಯದಲ್ಲಿ ಹಸಿರೇ ಉಸಿರು ಟ್ರಸ್ಟ್ ಅಧ್ಯಕ್ಷರು ಪದಾಧಿಕಾರಿಗಳು, ಗಣ್ಯರು, ಸೇರಿದಂತೆ ಗ್ರಾಮದ ಜನರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಮಾನ್ವಿ ಮತ್ತು ಸಿರವಾರ ತಾಲೂಕಿನ ಕಾರ್ಮಿಕರ ಮಕ್ಕಳಿಗಾಗಿ ಕಾರ್ಮಿಕ ವಸತಿಯುತ ಶಾಲೆಯನ್ನು ಮಂಜೂರು ಮಾಡಿಸಲಾಗುವುದು : ಹಂಪಯ್ಯನಾಯಕ



❑ ನೈಜ್ಯ ದೆಸೆ ನ್ಯೂಸ್

ಭಾಗದ ವಿದ್ಯಾರ್ಥಿಗಳು ಯಾವುದೇ ಸಾಧನೆಯಲ್ಲಿ ಹಿಂದೆ ಉಳಿದಿಲ್ಲ. ಬಡತನ, ತಿಳಿವಳಿಕೆ ಕೊರತೆಯಿಂದ ಹಿಂದೆ ಬೀಳುವ ರಾಯಚೂರು ಸೇರಿದಂತೆ ರಾಜ್ಯದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯ ಪರಿಸರ ಮೂಡಿಸುವ ನಿಟ್ಟಿನಲ್ಲಿ ರಾಯಚೂರು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಪ್ರಪ್ರಥಮ ಬಾರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಬಾವಿ ಉಚಿತ ತರಬೇತಿ ಕಾರ್ಯಕ್ರಮ ಆಯೋಜಿಸಿದೆ. ಈ ತರಬೇತಿಗೆ ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳು ತರಬೇತಿ ಪೂರ್ಣವಾಗುವವರೆಗೆ ಸಕ್ರಿಯ ಭಾಗಿಯಾಗಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮನವಿ ಮಾಡಿದ್ದಾರೆ. ಸಹಾಯಕ ಆಯುಕ್ತರ ಮನವಿ: ರಾಯಚೂರು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಆಯೋಜನೆ ಮಾಡಿರುವ ಈ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿಯ ಕಾರ್ಯಕ್ರಮವನ್ನು ರಾಯಚೂರು ಜಿಲ್ಲಾಡಳಿತವು ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ ಇವರ ಸಹಯೋಗದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಆಯೋಜನೆ ಮಾಡಿದೆ. ಈ ಕಾರ್ಯಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು ವಿಶೇಷ ಕಾಳಜಿ ವಹಿಸಿ ನಾನಾ ಸಮಿತಿಗಳನ್ನು ರಚಿಸಿ ಹಲವು ದಿನಗಳಿಂದ ಮಾರ್ಗದರ್ಶನ ಮಾಡಿದ್ದಾರೆ. ತಹಸೀಲ್ದಾರರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪ್ರಶ್ನೆ ಪತ್ರಿಕೆ ತಯಾರಿಸುವುದು, ಪಾರದರ್ಶಕವಾಗಿ ಪರೀಕ್ಷೆ ನಡೆಸುವುದು, ತರಬೇತಿಗಳ ಹಾಲ್ ಸಿದ್ಧಪಡಿಸುವುದು ಸೇರಿದಂತೆ ಹತ್ತಾರು ಮಹತ್ವದ ಕಾರ್ಯಗಳನ್ನು ತಿಂಗಳುಗಟ್ಟಲೇ ನಿರಂತರ ನಡೆಸಿ ಶ್ರಮಿಸಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳು ತಪ್ಪದೇ ತರಗತಿಗೆ ಹಾಜರಾಗಿ ತರಬೇತಿ ಪಡೆದುಕೊಂಡಲ್ಲಿ ಜಿಲ್ಲಾಡಳಿತದ ಕಾರ್ಯಕ್ಕೆ ಅರ್ಥ ಬರಲಿದೆ ಎಂದು ತರಗತಿಗೆ ಹಾಜರಾಗಲು ಅಭ್ಯರ್ಥಿಗಳಲ್ಲಿ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಮನವಿ ಮಾಡಿದ್ದಾರೆ.

# ವಸತಿ ನಿಲಯ ನಿರ್ಮಾಣಕ್ಕೆ 80 ಲಕ್ಷ ರೂಪಾಯಿ ಅನುದಾನ ವಸಂತ್ ಕುಮಾರ್



❑ ನೈಜ್ಯ ದೆಸೆ ನ್ಯೂಸ್

ರಾಯಚೂರು : ಡಿ 7 – ನಗರದ ಜಿಲ್ಲಾ ಯಾದವ ಸಮಾಜದಲ್ಲಿ ಎರಡು ತರಗತಿ ಕೋಣೆ ಹಾಗೂ ವಸತಿ ನಿಲಯ ನಿರ್ಮಾಣಕ್ಕೆ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ ಅಡಿ ವಿಧಾನಪರಿಷತ್ ಸದಸ್ಯ ಎ ವಸಂತ್ ಕುಮಾರ್ ಅವರು ಸುಮಾರು 80 ಲಕ್ಷ ರೂಪಾಯಿ ಅನುದಾನದಲ್ಲಿ ಭೂಮಿ ಪೂಜೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಎ ವಸಂತ್ ಕುಮಾರ್ ಅವರು ಜಿಲ್ಲೆಯಲ್ಲಿ ಹಿಂದುಳಿದ ಸಮಾಜವಾದ ಯಾದವ ಸಮಾಜವು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಹಿನ್ನೆಲೆಯಲ್ಲಿ ಸಮಾಜದ ಮಕ್ಕಳ ಶೈಕ್ಷಣಿಕ ಭವಿಷ್ಯದ ದೃಷ್ಟಿಯಿಂದ ಸಮಾಜದಿಂದ ನಡೆಸುತ್ತಿರುವ ಶಾಲೆಗೆ ಪ್ರೌಢಶಾಲೆಗೆ ಏರಿಸಲು 30 ಲಕ್ಷ ರೂಪಾಯಿ ಅನುದಾನದಲ್ಲಿ ಎರಡು ತರಗತಿ ಕೋಣೆ ಹಾಗೂ ಯಾದವ ಸಮಾಜದ ವಸತಿ ನಿಲಯಕ್ಕೆ 50 ಲಕ್ಷ ರೂಪಾಯಿ ಅನುದಾನದಲ್ಲಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನಡೆಸಿದ್ದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ನೀಡಿ ಸಮಾಜದ ಜೊತೆಗೆ ಇರುತ್ತೇನೆ ಎಂದು ಹೇಳಿದರು.ಜಿಲ್ಲೆಯಲ್ಲಿ ಹಲವು ಸಮಾಜಗಳು ಹಿಂದುಳಿದ ವರ್ಗಗಳ ಅಡಿಯಲ್ಲಿ ಇದ್ದು ಎಲ್ಲಾ ಸಮಾಜಗಳ ಅಭಿವೃದ್ಧಿಗೆ ಅನುದಾನ ನೀಡಲು ಪ್ರಯತ್ನ ಮಾಡುವುದಾಗಿ ಹೇಳಿದರು ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ನಗರಸಭೆ ಅಧ್ಯಕ್ಷ ಎ ಮಾರಪ್ಪ ಅವರು ಸಮಾಜದ ಬೆಳವಣಿಗೆಗೆ ಸಹಕಾರ ನೀಡುತ್ತಿರುವ ಎ ವಸಂತ್ ಕುಮಾರ್ ಅವರ ನಡೆಯು ಒಬ್ಬ ಪ್ರಜ್ಞಾವಂತ ಜನಪ್ರತಿನಿಧಿಯ ಪ್ರತೀಕವಾಗಿದೆ ಯಾದವ ಸಮಾಜದ ಜಿಲ್ಲಾಧ್ಯಕ್ಷ ಕೆ ಹನುಮಂತಪ್ಪ ಅವರು ಮಾತನಾಡಿ ಸಮಾಜದ ಶೈಕ್ಷಣಿಕ ಸಂಸ್ಥೆಗೆ ಈ ವಸಂತ್ ಕುಮಾರ್ ಅವರು ಅನುದಾನ ನೀಡುತ್ತಾರೆ ಎಂದು ಕನಸಿನಲ್ಲಿಯೂ ವಿಚಾರ ಮಾಡಿರಲಿಲ್ಲ ಯಾಕೆಂದರೆ ಕಳೆದ ಮೂರು ದಶಕಗಳಿಂದ ಸರಕಾರದಿಂದ ಯಾರು ಒಂದು ರೂಪಾಯಿ ಅನುದಾನ ನೀಡಿರಲಿಲ್ಲ ಈಗ ಅವರು 80 ಲಕ್ಷ ಅನುದಾನ ನೀಡಿರುವುದು ಹೆಮ್ಮೆಯ ವಿಷಯ ಅವರ ಸಹಕಾರ ಸಮಾಜ ಎಂದಿಗೂ ಮರೆಯುವುದಿಲ್ಲ ಎಂದು ಹೇಳಿದರು ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ಎ ಮಾರಪ್ಪ ವಕೀಲರು, ತಿಮ್ಮಪ್ಪ ಮಾರ್ಕೆಟಾಳ್, ದಾನಪ್ಪ ಯಾದವ್, ವೆಂಕಟರೆಡ್ಡಿ ಯಾದವ್, ಶಿವಕುಮಾರ್ ಯಾದವ, ಡಿಕೆ ಮುರಳಿ ಯಾದವ, ಲಕ್ಷ್ಮಣ ಯಾದವ, ರಾಘವೇಂದ್ರ ಯಾದವ, ವಿಷ್ಣು ಪ್ರಸಾದ ಯಾದವ, ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಕರೀಂ, ಕೆ ಅಸ್ಲಾಂ ಪಾಷ, ಬಸವರಾಜ್ ದರೂರು, ರಾಮಕೃಷ್ಣ ನಾಯಕ, ಡಾಕ್ಟರ್ ರಜಾಕ್ ಉಸ್ತಾದ್ ಹಾಗೂ ಇತರರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101